ಆರ್ಬಿಟ್ ಸಂಸ್ಥೆ, ಹುಮನಾಬಾದ ಮತ್ತು

ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ, ಕಲಬುರಗಿ

# ಸೇವಾವಾಣಿ

## ಫೆಬ್ರವರಿ 2025








**February 2025**

**"ಆರ್ಬಿಟ್ ಸಂಸ್ಥೆಯ 30 ವರ್ಷದ ಜುಬುಲಿ ಕಾರ್ಯಕ್ರಮ" "ಚಪ್ಪಾಳೆ ತಟ್ಟುವ ಕೈಗಿಂತ ಕಣ್ಣೀರು ಒರೆಸುವ ಒಂದು ಬೆರಳು ಶ್ರೇಷ್ಠವಾದದ್ದು" ಫಾದರ್ ಸಂತೋಷ್ ಡಯಾಸ್, "ಬಡವರಿಗೆ ಪುನರ್ಜನ್ಮ ನೀಡಿದ ಆರ್ಬಿಟ್ ಸಂಸ್ಥೆ" ಫಲಾನುಭವಿ ವಿಮಲಾಭಾಯಿ.**

ಗುಲ್ಬರ್ಗ ಧರ್ಮ ಕ್ಷೇತ್ರದ ಧರ್ಮಾಧಿಕಾರಿಗಳಾದ ಡಾಕ್ಟರ್ ಮೈಕಲ್ ಮಿರಂದ ಕಾರ್ಯಕ್ರಮದ ಘನ ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಾ ಆರ್ಬಿಟ್ ಸಂಸ್ಥೆಯು 30 ವರ್ಷಗಳಿಂದ ಬಡವರ ಕಣ್ಣೀರು ಒರೆಸುವ ಕೆಲಸ ಮಾಡಿದೆ. ಸಂತ ಮದರ್ ತೆರೇಸಾ ಅವರ ತತ್ವಾದರ್ಶಗಳನ್ನು ಅಳವಡಿಸಿಕೊಂಡು ಬಡವರ ಸೇವೆಯೇ ದೇವರ ಸೇವೆ ಎಂಬಂತೆ 30 ವರ್ಷಗಳಿಂದ ಸೇವೆಯನ್ನು ಮಾಡಿಕೊಂಡು ಬರುತ್ತಿದೆ. ಮುಖ್ಯ ಅತಿಥಿಯಾಗಿ ಆಗಮಿಸಿದ ವಿಧಾನ ಪರಿಷತ್ ಸದಸ್ಯರಾದ ಡಾ. ಚಂದ್ರಶೇಖರ್ ಪಾಟೀಲರು ಮಾತನಾಡಿ, ಸಂಸ್ಥೆ 30 ವರ್ಷಗಳಲ್ಲಿ ಮಾಡಿದ ಸೇವೆಯು ಸುವರ್ಣ ಅಕ್ಷರಗಳಲ್ಲಿ ಬರೆಯುವಂತದ್ದು. ದೀನರ, ದಲಿತರ, ದಿಕ್ಕಿಲ್ಲದವರಿಗಾಗಿ ಸದಾ ಸೇವೆಯನ್ನು ಮಾಡುತ್ತಿದೆ. ವಿಶೇಷವಾಗಿ ಆರೋಗ್ಯ ಕ್ಷೇತ್ರ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಜನರ ಜೀವನ ಮಟ್ಟ ಉನ್ನತ ಮಟ್ಟಕ್ಕೆ ಏರಿಸುವಲ್ಲಿ ಸಂಸ್ಥೆಯ ಪಾತ್ರ ತುಂಬಾ ದೊಡ್ಡದಾಗಿದೆ.  ಸ್ಥಾಪನೆಯಾಗಿ ಇಲ್ಲಿಯವರೆಗೆ ಮಾಡಿರುವ ಸೇವೆಯನ್ನು ನಾವು ಅತಿ ಸಮೀಪದಿಂದ ಗಮನಿಸಿದ್ದೇವೆ ಸಂಸ್ಥೆಯ ನಿರ್ದೇಶಕರು ಧರ್ಮ ಗುರುಗಳು ಹಾಗೂ ಸಿಸ್ಟರ್ಸ್ ಅವರು ತಮ್ಮ ಜೀವನವನ್ನೇ ಸಮಾಜದ ನಿಸ್ವಾರ್ಥ ಸೇವೆಗಾಗಿ ಮುಡಿಪಿಟ್ಟದ್ದಾರೆ, ಹುಮ್ನಾಬಾದ್ ತಾಲೂಕಿನ ಪಾಟೀಲ್ ಪರಿವಾರ ಆರ್ಬಿಟ್ ಸಂಸ್ಥೆಯೊಂದಿಗೆ ಸದಾ ಬೆಂಬಲವಾಗಿರುವುದಾಗಿ ನುಡಿದರು. ಶ್ರೀ ದಾಸ್ ಸೂರ್ಯವಂಶಿ, ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ರಾಜ್ಯ ಆಯುಕ್ತರು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ವಿಶೇಷ ಚೇತನರಿಗಾಗಿ ಸರಕಾರವು ಹಲವಾರು ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ ಇದರ ಸದುಪಯೋಗವನ್ನು ಪ್ರತಿಯೊಬ್ಬ ವಿಶೇಷ ಚೇತನರು ಪಡೆದುಕೊಳ್ಳಬೇಕು. ಸರಕಾರದ ಸೌಲತ್ತುಗಳು ಅರ್ಹ ಫಲಾನುಭವಿಗಳು ಅನುಭವಿಸಬೇಕು ಎಂದು ನುಡಿದರು. ಪೂರ್ವ ನಿರ್ದೇಶಕರಾದ ಫಾದರ್ ಸಂತೋಷ್ ಡಯಾಸ್ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಈ 30 ವರ್ಷಗಳಲ್ಲಿ ಸಂಸ್ಥೆ ಬೆಳೆಯುವುದರೊಂದಿಗೆ ಸಂಸ್ಥೆಯ ಫಲಾನುಭವಿಗಳಾದ ಮಹಿಳೆಯರು ಸಹ ಬೆಳೆದಿರುವುದು ತುಂಬಾ ಸಂತೋಷದ ಸಂಗತಿ. 'ಚಪ್ಪಾಳೆ ತಟ್ಟುವ ಕೈಗಿಂತ ಕಣ್ಣೀರು ಒರೆಸುವ ಒಂದು ಬೆರಳು ಶ್ರೇಷ್ಠ' ಎಂದು ತಿಳಿಸಿದರು. ಸಂಸ್ಥೆಯ ಫಲಾನುಭವಿ ಶ್ರೀಮತಿ ವಿಮಲಬಾಯಿ ತಮ್ಮ ಅನುಭವವನ್ನು ಹಂಚಿಕೊಳ್ಳುವ ಮೂಲಕ ಸುಮಾರು 30 ವರ್ಷಗಳಿಂದ ಆರ್ಬಿಟ್ ಸಂಸ್ಥೆಯೊಂದಿಗೆ ನಿಕಟ ಸಂಬಂಧವನ್ನು ಹೊಂದಿ ಮಹಿಳಾ ಸ್ವಸಹಾಯ ಸಂಘದಲ್ಲಿ ಸಕ್ರಿಯ ಸದಸ್ಯತ್ವವನ್ನು ಪಡೆದುಕೊಂಡು, ಸಂಸ್ಥೆಯ ಪ್ರತಿಯೊಂದು ಕಾರ್ಯಕ್ರಮ, ತರಬೇತಿಗಳು ಅರಿವು ಮೂಡಿಸುವ, ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಇಂದು ನಾವು ಸಮಾಜದ ಮುಖ್ಯ ವಾಹಿನಿಯಲ್ಲಿ ಆರ್ಥಿಕ ಸ್ವಾತಂತ್ರ್ಯದೊಂದಿಗೆ ಮಹಿಳಾ ನಾಯಕತ್ವ ಗುಣಗಳನ್ನು ಬೆಳೆಸಿಕೊಂಡಿದ್ದೇವೆ, ಆರ್ಬಿಟ್ ಸಂಸ್ಥೆ ನಮಗೆ ಪುನರ್ಜನ್ಮವನ್ನು ನೀಡಿದೆ ಎಂದು ತಮ್ಮ ಅನುಭವವನ್ನು ಹಂಚಿಕೊಂಡರು.ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ಫಲಾನುಭವಿಗಳಿಗೆ ವೀಲ್‌ಚೇರ್, ಸಹಾಯಧನ, ಕುರಿವಿತರಣೆ, ಸರಕಾರಿ ಸವಲತ್ತುಗಳ ಯು.ಡಿ.ಐ.ಡಿ ಕಾರ್ಡ್, ತರಬೇತಿಯಲ್ಲಿ ಭಾಗವಹಿಸಿ ಪಡೆದುಕೊಂಡ ಪ್ರಮಾಣ ಪತ್ರಗಳು ಹಾಗೂ ಡ್ರೈವಿಂಗ್ ಲೈಸೆನ್ಸ್ ಗಳನ್ನು ಫಲಾನುಭವಿಗಳಿಗೆ ಗಣ್ಯರಿಂದ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಮಹಿಳೆಯರಿಂದ ಕೋಲಾಟ, ಜಾನಪದ ಗೀತೆಗಳು, ನೃತ್ಯ, ಶಾಲಾ ಮಕ್ಕಳಿಂದ ಅರಿವು ಮೂಡಿಸುವ ನಾಟಕ ಮಾಡುವ ಮೂಲಕ ನೆರೆದಿದ್ದ ಜನರನ್ನು ರಂಜಿಸಿದರು. ಕಾರ್ಯಕ್ರಮದಲ್ಲಿ ಮೌಲಾನಾ ತಸದ್ದುಗ್ ಶಾಬ್ ನದವೆ ಅಧ್ಯಕ್ಷರು ಜಮಾತೆ ಉಲ್ಮ ಬೀದರ್ ಇವರು ತಮ್ಮ ಹಿತನುಡಿಗಳನ್ನು ನುಡಿದರು. ಸಂತೋಷ್ ಪಾಟೀಲ್ ಹುಮ್ನಾಬಾದ್, ಬೀದರ್ ವಲಯದ ಮುಖ್ಯ ಗುರುಗಳಾದ ಕ್ಲೇರಿ ಡಿಸೋಜಾ, ಹುಮ್ನಾಬಾದ್ ತಾಲೂಕಿನ ಮುಖ್ಯ ವೈದ್ಯಾಧಿಕಾರಿಗಳಾದ ನಾಗನಾಥ್ ಹುಲಸೂರೆ, ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಡಾಕ್ಟರ್ ಗುರುರಾಜ್ ಕುಲಕರ್ಣಿ, ಶ್ರೀ ಶ್ರೀನಿಧಿ ಉಪಸ್ಥಿತರಿದ್ದರು. ಕಥೋಲಿಕ ಧರ್ಮಸಭೆಯ ಗುರುಗಳು ಹಾಗೂ ಸಿಸ್ಟರ್ಸ್ ಬಹು ಸಂಖ್ಯೆಯಲ್ಲಿ ಭಾಗವಹಿಸಿದರು, ಸಂಸ್ಥೆಯ ಒಟ್ಟು ಫಲಾನುಭವಿಗಳು ಸುಮಾರು 1200 ಜನ ಭಾಗವಹಿಸಿದರು ಹಾಗೂ ಸಂಸ್ಥೆಯ ಎಲ್ಲಾ ಸಿಬ್ಬಂದಿವರ್ಗದವರು ಸಕ್ರೀಯವಾಗಿ ಭಾಗವಹಿಸುವ ಮೂಲಕ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.



ಪೂಜ್ಯ ರಾಬರ್ಟ್ ಮಿರಾಂದಾ
ಗುಲಬರ್ಗಾ ಧರ್ಮಾಧ್ಯಕ್ಷರು

ವಂ. ಫಾ॥ ವಿಕ್ಟರ್ ವಾಸ್
ನಿರ್ದೇಶಕರು, ಆರ್ಬಿಟ್ ಮತ್ತು
ಸೇವಾ ಸಂಗಮ ಸಂಸ್ಥೆ, ಕಲಬುರಗಿ
















orbit humnabad
Orbit Bidar
@orbitbidar330
www.orbitbidar.in
+91 8660968063
+91 8971119914
Orbitbidar93@gmail.com

# “ನವಜೀವನ (ಎ.ಪಿ.ಎಫ್) ಕಾರ್ಯಕ್ರಮ”

## “ಮುರಾರ್ಜಿ ದೇಸಾಯಿ ಹೈ ಸ್ಕೂಲ್ ಮಕ್ಕಳಿಗೆ ಮಾನಸಿಕ ಅಸ್ವಸ್ಥರ ಬಗ್ಗೆ ಮಾಹಿತಿ”



ದಿನಾಂಕ್ 10/01/2025ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಖೇಡ ಗ್ರಾಮದ ಮುರಾರ್ಜಿ ದೇಸಾಯಿ ಹೈಸ್ಕೂಲ್ ಮಕ್ಕಳಿಗೆ ಅಜೀಮ್ ಪ್ರೇಮ್‌ಜಿ ಇವರ ಸಂಯುಕ್ತ ಆಶ್ರಯದ ಆರ್ಬಿಟ್ ಸಂಸ್ಥೆಯ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಮಹಾದೇವಿ ಸಂಪನ್ಮೂಲ ವ್ಯಕ್ತಿಯಾಗಿ ಮತ್ತು ರವಿ ಸರ್ ಆಪ್ತಸಮಾಲೋಚಕರು ಕಾರ್ಯಕ್ರಮದ ಮಾನಸಿಕ ಅಸ್ವಸ್ಥರ ಬಗ್ಗೆ ಮಾಹಿತಿ ನೀಡಲಾಯಿತು. ಮಾನಸಿಕ ಕಾಯಿಲೆಯು ಒಂದು ಮೆದುಳಿನ ಕಾಯಿಲೆಯಾಗಿದೆ ಎಂದು ತಿಳಿಸುತ್ತಾ ಅದರ ಲಕ್ಷಣಗಳ ಬಗ್ಗೆ ಮಾಹಿತಿ ನೀಡಲಾಯಿತು. ಮಾನಸಿಕ ಕಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಯ ಲಕ್ಷಣಗಳು, ಕಾರಣ ಇಲ್ಲದೆ ಅಳೋದು ಕಾರಣ ಇಲ್ಲದೆ ನಗುವುದು, ದಾರಿಯಲ್ಲಿ ಹೋಗುವವರನ್ನು ಕಂಡು ಬಯ್ಯೋದು, ಪದೇಪದೇ ಕೈ ತೊಳೆಯುವುದು, ಪದೇಪದೇ ನೀರು ಚೆಲ್ಲೋದು, ಏಕಾಂಗಿ ಆಗಿರೋದು ಹೀಗೆ ಅವರ ಲಕ್ಷಣಗಳು ಇರುತ್ತವೆ. ಕಂಡು ಬಂದಲ್ಲಿ ನೀವು ಹುಮ್ನಾಬಾದ್ ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರತಿ ಬುಧವಾರ ವೈದ್ಯರು ಬರುತ್ತಾರೆ ಅವರನ್ನು ವೈದ್ಯರಬಳಿ ತಪಾಸಣೆ ಮಾಡಿಸಿಕೊಳ್ಳಲು ಕರೆದುಕೊಂಡು ಬರಬೇಕಾಗಿ ತಿಳಿಸಲಾಯಿತು. ಉಚಿತವಾಗಿ ಅವರಿಗೆ ಔಷಧಿಯನ್ನು ಕೊಡುತ್ತಾರೆ. ಪ್ರತಿ ಬುಧವಾರ ಬೆಳಗ್ಗೆ 10 ಗಂಟೆಯಿಂದ ಮಧ್ಯಾನ 1 ಗಂಟೆಯವರೆಗೆ ಇರುತ್ತಾರೆ ಹೆಚ್ಚಿನ ಮಾಹಿತಿಗಾಗಿ ಈ ನಂಬರ ಕರೆ ಮಾಡಿ 9036664271

## “ಆಶಾ ಕಾರ್ಯಕರ್ತರಿಗೆ ಸ್ಟೇಕ್ ಹೋಲ್ಡರ್ ತರಬೇತಿ”



ದಿನಾಂಕ 21.01.2025 ರಂದು ಹುಮ್ನಾಬಾದ್ ತಾಲೂಕಿನ ಹುಡುಗಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್‌ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಆಶಾ ಕಾರ್ಯಕರ್ತರಿಗೆ ಸ್ಟೇಕ್ ಹೋಲ್ಡರ್ ತರಬೇತಿಯನ್ನು ಆಯೋಜಿಸಿದ್ದು ಈ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಕಾರ್ಯಕ್ರಮದ ಆಪ್ತ ಸಮಾಲೋಚಕರಾದ ಶ್ರೀ ಅರುಣ್ ಕೋಟೆ ರವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ, ಈಗಾಗಲೇ ಆರ್ಬಿಟ್ ಸಂಸ್ಥೆಯು ತಮ್ಮೆಲ್ಲರಿಗೆ ಹಲವಾರು ಬಾರಿ ತರಬೇತಿಯನ್ನು ನೀಡಿದ್ದು, ಈಗ ಅದರ ಮುಂದುವರೆದ ಭಾಗವಾಗಿ ಸಾಮಾನ್ಯ ಮಾನಸಿಕ ಅಸ್ವಸ್ಥರ ಗುಣಲಕ್ಷಣಗಳನ್ನು ಗುರುತಿಸಿ ಅವುಗಳನ್ನು ಸಮಲೋಚನೆ ಮಾಡುವ ಮೂಲಕ ಪುನರ್ವರ್ತಿಸಬಹುದು. ಸಮುದಾಯಗಳಲ್ಲಿ ನಿಮ್ಮ ಕ್ಷೇತ್ರಗಳಲ್ಲಿ ಇಂತಹ ಸಮಸ್ಯೆಗಳನ್ನು ಒಳಗೊಂಡಿರುವ ವ್ಯಕ್ತಿಗಳನ್ನು ಗುರುತಿಸಿದಾಗ ಅವರನ್ನು ಡಿ.ಎಮ.ಹೆಚ್.ಪಿಕ್ಯಾಂಪಿಗೆ ಕಳಿಸುವುದರೊಂದಿಗೆ ತಮ್ಮ ಮಾನವಿಯತೆಯನ್ನು ತೋರುವುದು ಎಂದು ತಿಳಿಸಲಾಯಿತು. ಈ ತರಬೇತಿಯಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆಯಾದ ಶ್ರೀಮತಿ ಪ್ರೀತಿ, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರಾದ ಡಾ. ರಾಜೇಶ್ ಪವರ್, cho ಹಾಗೂ ಆಶಾ ಕಾರ್ಯಕರ್ತೆಯರು ಸೇರಿ ಒಟ್ಟು 40 ಜನರು ಭಾಗವಹಿಸಿದ್ದರು.

## “ಮಾನಸಿಕ ಅಸ್ವಸ್ಥರ ಬಗ್ಗೆ ಮಾಹಿತಿ”



ದಿನಾಂಕ 09/01/2025 ರಂದು ಹುಮನಾಬಾದ ತಾಲೂಕಿನ ಮೋಳಕೆರ ಗ್ರಾಮದ ಗ್ರಾಮಸ್ಥರಿಗೆ ಮಾನಸಿಕ ಕಾಯಿಲೆ ಎಂದರೇನು? ಇದು ಒಂದು ಮೆದುಳಿಗೆ ಸಂಬಂಧಪಟ್ಟ ಕಾಯಿಲೆ ಎಂದು ಮಾಹಿತಿ ನೀಡಲಾಯಿತು. ಈ ಮಾನಸಿಕ ಕಾಯಿಲೆಗೆ ಉಚಿತವಾಗಿ ಹುಮನಾಬಾದ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರತಿ ಬುಧವಾರ ವೈದ್ಯರು ಬರುತ್ತಾರೆ. ಫಲಾನುಭವಿಗಳಿಗೆ ತಪಾಸಣೆ ಮಾಡಿ ಔಷಧಿಯನ್ನು ಕೊಡುತ್ತಾರೆ. ಯಾವುದೇ ಖರ್ಚು ಇಲ್ಲದೆ ಪ್ರತಿ ಬುಧವಾರ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾನ 1 ಗಂಟೆಯ ತನಕ ಇರುತ್ತಾರೆ ಎಂದು ಮಾಹಿತಿ ನೀಡಿ, ಕರಪತ್ರ ಕೊಡಲಾಯಿತು. ಮತ್ತು ನಿಮ್ಮ ಪರಿಚಯಿ ಇದ್ದವರಲ್ಲಿ ಯಾರಾದರೂ ಇದ್ದರೆ ಇವರಿಗೆ 9036664271 ಕರೆ ಮಾಡಿ ತಿಳಿಸಲು ಹೇಳಲಾಯಿತು.

## “ಕೇಂದ್ರ ಆಧರಿತವಾಗಿ ಆಪ್ತ ಸಮಾಲೋಚನೆ ಕಾರ್ಯಕ್ರಮ”



20/1/2025 ರಂದು ಹಿಲಾಲಪೂರ ಗ್ರಾಮದಲ್ಲಿ ಕೇಂದ್ರ ಆಧರಿತವಾಗಿ ಆಪ್ತಸಮಾಲೋಚನೆ ಕಾರ್ಯಕ್ರಮವನ್ನು ನವಜೀವನ ಕಾರ್ಯಕ್ರಮದ ಅಡಿಯಲ್ಲಿ ಅಂಗನವಾಡಿ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ಮೊದಲು ಆಪ್ತಸಮಾಲೋಚನೆಯೂ ಪ್ರತಿ ಫಲಾನುಭವಿಗಳಿಗೆ ಪ್ರತಿಯೊಂದು ಮನೆಗೆ ಹೋಗಿ ಅವರ ಸ್ಥಿತಿಗತಿ ಹಾಗೂ ಕಷ್ಟ ಸುಖಗಳ ಮತ್ತು ನಿರಂತರ ಚಿಕಿತ್ಸೆಗಳ ಮಾತ್ರೆಗಳು ಸೇವಿಸುವುದು ಹಾಗೂ ಕುಟುಂಬದಲ್ಲಿರುವ ಹೊಂದಾಣಿಕೆ ಮತ್ತು ಸಮುದಾಯಗಳ ಚಟುವಟಿಕೆಯಲ್ಲಿ, ಸಭೆ ಸಂಭ್ರಮಗಳಲ್ಲಿ, ಭಾಗವಹಿಸುವಿಕೆ ಹಾಗೂ ಆಪ್ತಸಮಾಲೋಚನೆಯಿಂದ ಹೊರ ಬರುವುದಕ್ಕೆ ಸಾಧ್ಯವಾಗುವ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಾ, ಇಂದು ಆಪ್ತ ಸಮಾಲೋಚನೆಯನ್ನು ಪ್ರಸ್ತುತ ಕೇಂದ್ರ ಆಧರಿತವಾಗಿ ಆಪ್ತಸಮಾಲೋಚನೆ ಮಾಡಲಾಗುತ್ತಿದೆ. ಈ ಆಪ್ತಸಮಾಲೋಚನೆಯಲ್ಲಿ ಅವರು ಮನೆಯಿಂದ ಹೊರಗಡೆ ಬರದೇ ಇರುವುದು ಒಂದು ದೊಡ್ಡ ಪ್ರಶ್ನೆ ಆಗಿತ್ತು.ಈ ಸ್ಥಿತಿಯಲ್ಲಿ ಮನೆಯಿಂದ ಸಮುದಾಯ ಭವನ ಅಥವಾ ಅಂಗನವಾಡಿ ಕೇಂದ್ರಗಳಲ್ಲಿ ಭೇಟಿ ನೀಡುವುದು ಹಾಗೂ ಜನರ ಸಂಪರ್ಕ ಪಡೆಯಲು ಒಂದು ಅವಕಾಶವಾಗುತ್ತಿದೆ ಎಂದು ಫಲಾನುಭವಿಗಳು ವ್ಯಕ್ತಪಡಿಸಿರುತ್ತಾರೆ.ಯಾವುದೇ ವಿಷಯಗಳನ್ನು ಸಂಕೋಚವಿಲ್ಲದೆ ವ್ಯಕ್ತಪಡಿಸುತ್ತಾ ಆಪ್ತಸಮಾಲೋಚನೆ ಪಡೆಯುತ್ತಿದ್ದಾರೆ.ಶ್ರೀ ರವಿ ಜಿ ರವರು ಫಲಾನುಭವಿಗಳಿಗೆಆಪ್ತಸಮಲೋಚನೆ ಕೊಡುವುದರ ಮುಖಾಂತರ ಅರ್ಥವಾಗದ ವಿಷಯಗಳನ್ನು ಮಾರ್ಗದರ್ಶನ ಮೂಲಕ ಮಾಹಿತಿಗಳು ನೀಡುತ್ತಿರುತ್ತಾರೆ.ಇದರಿಂದ ಸಂತೋಷದಿಂದ ಫಲಾನುಭವಿಗಳು ಇದರ ಉಪಯೋಗವನ್ನು ಪಡೆದುಕೊಂಡು ಆರ್ಬಿಟ್ ಸಂಸ್ಥೆಯ ನಿರ್ದೇಶಕರಿಗೂ, ಸಂಸ್ಥೆಯ ಕಾರ್ಯಕರ್ತರಿಗೂ ಧನ್ಯವಾದಗಳು ಸಲ್ಲಿಸಿದ್ದಾರೆ.

## “ಮಾನಸಿಕ ಅಸ್ವಸ್ಥರಿಗೆ ಆಪ್ತ ಸಮಾಲೋಚನೆ”



ದಿನಾಂಕ 25/01/2025 ರಂದು ಹುಮ್ನಾಬಾದ್ ನಗರದ ಜೋಶಿ ಕಾಲೋನಿಗೆ ಭೇಟಿ ನೀಡಿ ಆರ್ಬಿಟ್ ಸಂಸ್ಥೆಯ ಆಪ್ತ ಸಮಲೋಚಕರಾದ ಶ್ರೀ ಅರುಣ್ ಕೋಟೆ ಇವರಿಂದ ಹೊಸ ಮಾನಸಿಕ ಅಸ್ವಸ್ಥರಿಗೆ ಆಪ್ತ ಸಮಾಲೋಚನೆ ಮಾಡಲಾಯಿತು.ಫಲಾನುಭವಿಗಳು ನಿರಂತರವಾಗಿ ಮಾತ್ರೆಗಳು ತೆಗೆದುಕೊಳ್ಳುವುದರ ಜೊತೆಗೆ ದಿನನಿತ್ಯದ ಚಟುವಟಿಕೆಗಳಲ್ಲಿಯೂ ಕೂಡ ಭಾಗವಹಿಸುವುದು ಬಹಳ ಅವಶ್ಯಕತೆ ಆಗಿದೆ.ಮತ್ತು ಜನರೊಂದಿಗೆ ಬೆರೆಯುವುದರಿಂದ ತಮ್ಮ ಸಮಯವನ್ನು ಇತರರೊಂದಿಗೆ ಕಳೆಯುವುದರಿಂದ ಕೂಡ ಮನುಷ್ಯ ತನ್ನ ಜೀವನದಲ್ಲಿ ನೆಮ್ಮದಿಯನ್ನು ಕಾಣಬಹುದು ಎಂದು ಆಪ್ತ ಸಮಾಲೋಚನೆಯ ಮುಖಾಂತರ ತಿಳಿಸಿದರು.

## “ಅಂಗನವಾಡಿ ಕಾರ್ಯಕರ್ತೆಯರಿಗೆ ಮಾನಸಿಕ ಅಸ್ವಸ್ಥರ ಕುರಿತು ಒಂದು ದಿನದ ಸಹಭಾಗಿತ್ವ ತರಬೇತಿ”



ದಿನಾಂಕ 28.01.2025 ರಂದು ಹುಮನಾಬಾದ್ ತಾಲೂಕಿನ ದುಬಲಗುಂಡಿ ಗ್ರಾಮದಲ್ಲಿ ಅರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್‌ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಮಾನಸಿಕ ಅಸ್ವಸ್ಥರ ಕುರಿತು ಒಂದು ದಿನದ ಸಹಭಾಗಿತ್ವ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಈ ತರಬೇತಿಗೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀಮತಿ ಪೂಜಾ ರವರು ತರಬೇತಿಯನ್ನು ಉದ್ದೇಶಿಸಿ ಮಾತನಾಡುತ್ತಾ, ವಿಶೇಷವಾಗಿ ಅಂಗನವಾಡಿ ಕಾರ್ಯಕರ್ತೆಯರಿಗೆ ಮಾನಸಿಕ ಆರೋಗ್ಯ ಕಾರ್ಯಕ್ರಮವನ್ನು ಮುಂದಿನ ದಿನಗಳಲ್ಲಿ ಜವಾಬ್ದಾರಿಯನ್ನು ವಹಿಸುವ ಮೂಲಕ ಕಾರ್ಯಕ್ರಮವನ್ನು ಉತ್ತಮವಾಗಿ ನಡೆಸಿಕೊಂಡು ಹೋಗುವ ಕುರಿತು ತರಬೇತಿ ನೀಡಲಾಯಿತು. ಮುಂದಿನ ದಿನಗಳಲ್ಲಿ ಸಮುದಾಯದಲ್ಲಿ ಮಾನಸಿಕ ರೋಗಗಳನ್ನು ಗುರುತಿಸುವುದು ಮತ್ತು ಅವರಿಗೆ ಆಪ್ತ ಸಮಲೋಚನೆ ಮಾಡುವುದು. ಅಗತ್ಯವಿದ್ದಲ್ಲಿ ಸೂಕ್ತ ಚಿಕಿತ್ಸೆಗಾಗಿ ಸರಕಾರಿ ಆಸ್ಪತ್ರೆಯಲ್ಲಿ ನಡೆಯುವ ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಚಿಕಿತ್ಸೆ ಕೊಡಿಸಲು ಪ್ರಯತ್ನಿಸುವುದು. ಅರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದಡಿಯಲ್ಲಿ ಸಮುದಾಯ ಆಧಾರಿತವಾಗಿ ಪುನರ್ ವಸತಿಗೊಳಿಸುವ ಕಾರ್ಯಕ್ರಮದಲ್ಲೇ ನಿರತರಾಗಿ ಸಮುದಾಯ ಸಹಭಾಗಿಗಳಾದ ಅಂಗನವಾಡಿ ಕಾರ್ಯಕರ್ತೆಯರು ಮುಂದಿನ ದಿನಗಳಲ್ಲಿ ಯೋಜನೆ ಜವಾಬ್ದಾರಿ ನಿರ್ವಹಿಸುವಂತೆ ತರಬೇತಿಯನ್ನು ನೀಡಲಾಯಿತು.ಈ ತರಬೇತಿಯಲ್ಲಿ ಅಂಗನವಾಡಿ ಮೇಲ್ವಿಚಾರಕರು ಮತ್ತು ಅಂಗನವಾಡಿ ಕಾರ್ಯಕರ್ತರು ಒಟ್ಟು ಸೇರಿ 27 ಜನರು ಭಾಗವಹಿಸಿದರು.

## “ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ”



ಜನವರಿ 25ರಂದು ಚಿಟ್ಟಗುಪ್ಪ ತಾಲೂಕಿನ ತಾಳ್ಮಡಗಿ ಗ್ರಾಮದ ಮಹಿಳಾ ಸ್ವಸಹಾಯ ಸಂಘದ ಮಹಿಳೆಯರಿಗೆ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ ನಡೆಸಲಾಯಿತು.ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣ್ ಕುಮಾರ್ ಅವರು ಮಹಿಳೆಯರಿಗೆ ಮಾಹಿತಿ ನೀಡುತ್ತಾ ಆರೋಗ್ಯ ಎಂದರೇನು?ಮಾನಸಿಕ ಆರೋಗ್ಯ ಎಂದರೇನು?ಮತ್ತು ಮಾನಸಿಕ ಕಾಯಿಲೆ ಎಂದರೇನು?ಮಾನಸಿಕ ಕಾಯಿಲೆ ಹೇಗೆ ಬರುತ್ತದೆ ಮತ್ತು ಈ ಕಾಯಿಲೆ ಬಂದಾಗ ಮೂಢನಂಬಿಕೆಗೆ ಬಲಿಯಾಗದೆ ಇದು ಒಂದು ಮೆದುಳಿನ ಕಾಯಿಲೆಯಾಗಿದೆ ಎಂದು ತಿಳಿದುಕೊಂಡು ಸೂಕ್ತ ವೈದ್ಯರ ಸಲಹೆ ಪಡೆದು ಇತರ ರೋಗಗಳಂತೆ ಗುಣ ಪಡಿಸಬಹುದೆಂದು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 20 ಮಹಿಳೆಯರು ಭಾಗವಹಿಸಿದ್ದರು.

## “ಸಂಘದ ಸದಸ್ಯರಿಗೆ ಸಮುದಾಯ ಆಧಾರಿತ ಪ್ರೇರಿತ ವಿಧಾನ ತರಬೇತಿ”




ದಿನಾಂಕ 8/1/2025 ರಂದು ಹುಮ್ನಾಬಾದ್ ತಾಲೂಕಿನ. ಹಲ್ಲಿಖೆಡ್ (ಬಿ) ನಜರತ್ ಕಾಲೋನಿಯಲ್ಲಿ ನಾಲ್ಕು ಮಹಿಳಾ ಸ್ವಸಹಾಯ ಸಂಘದ ಸದಸ್ಯರಿಗೆ ಸಮುದಾಯ ಆಧಾರಿತ ಪ್ರೇರಿತ ವಿಧಾನ ತರಬೇತಿ ಆಯೋಜಿಸಲಾಯಿತು, ತರಬೇತಿಯಲ್ಲಿ ಸಮುದಾಯ ಎಂದರೇನು? ಒಂದು ಜನ ಸಮೂಹವೇ ಸಮುದಾಯ ಎಂದು ತಿಳಿಸುತ್ತಾ ಸಮುದಾಯದ ಪ್ರಕಾರಗಳು ಹಾಗೂ ಸಮುದಾಯದ ಸಮಸ್ಯೆಗಳನ್ನು ಗುರುತಿಸುವುದು ಮತ್ತು ಅವುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವುದು ಮತ್ತು ಇಲಾಖೆಗಳೊಂದಿಗೆ ಜಾಲ ಬಂದ ಬೆಳೆಸಿ ಕೊಂಡು ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದು ಸಹ ಗ್ರಾಮದ ಅಭಿವೃದ್ಧಿ ಎಂದು ಹೇಳಬಹುದು ಎಂದು ಹಲವಾರು ವಿಷಯಗಳ ಬಗ್ಗೆ ತರಬೇತಿಯನ್ನು ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಡೇವಿಡ್ ರವರು ಮಹಿಳೆಯರಿಗೆ ಮನವರಿಕೆ ಮಾಡಿದರು.

## “ಜೀವನ ಬದುಕಿಗೆ ಯು.ಡಿ.ಐ.ಡಿ ಕಾರ್ಡ್ ಮತ್ತು ಪೆನ್ಷನ್”




ಚಿಟಗಪ್ಪ ನಗರದ ತಲಾಬ ಓಣಿಯಲ್ಲಿ ವಾಸಿಸುತಿದ್ದ ಶ್ರೀ. ಇಬ್ರಾಹೀಮ ರವರ ತ್ರಿತಿಯಾ ಪುತ್ರ ಕುಮಾರ ಬಿಲಾಲ ಪಾಶ ವಯಸ್ಸು 30 ಇತನು ಟೈಲ್ಸ್ ಕೆಲಸಗಾರನಾಗಿದ್ದನು.ಈತನ ಹತ್ತಿರ ಸುಮಾರು ದಿನಾ ನಾಲ್ಕರಿಂದ ಐದು ಜನರು ಕೂಲಿ ಕೆಲಸ ಮಾಡುತಿದ್ದರು. ಇವರು 10ನೇಯ ತರಗತಿ ತೇರ್ಗಡೆ ಮಾಡಿದರು. ಕುಟುಂಬದ ಎಲ್ಲಾ ಜವಬ್ದಾರಿಯನ್ನು ಇವರೇ ನೋಡುತಿದ್ದರು.ಕಳೆದ 6 ವರ್ಷಗಳಿಂದ ಖಿನ್ನತೆಗೆ ಒಳಗಾಗಿದ್ದರು.ಮನೆಯಲ್ಲಿದ್ದ ಎಲ್ಲಾ ಒಡವೆಗಳು ಮಾರಿ ಆಸ್ಪತ್ರೆಗೆ ತೋರಿಸಿದ್ದರು.ಮನೆಯಲ್ಲಿ ಬಡತನ ತಲೆದೂರಿತು.ತಂದೆ ವಯಾಸಾದ ವೃದ್ಧ. ಹೀಗಾಗಿ ಕುಟುಂಬಕ್ಕೆ ಆರ್ಥಿಕವಾಗಿ ಬಹಳ ಕಷ್ಟವಾಗುತಿತ್ತು. ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರ ಪ್ರಯತ್ನದಿಂದ ನನ್ನ ಕುಟುಂಬಕ್ಕೆ ಯು.ಡಿ.ಐ.ಡಿ ಕಾರ್ಡ್ ಲಬಿಸಿದೆ. ಇದರಿಂದ ನನ್ನ ಕುಟುಂಬಕ್ಕೆ ಪೆನ್ಷನ್ ಪಡೆವುತಿದ್ದೇನೆ ಎಂದು ಸಹಾಯ ಮಾಡಿದ ಆರ್ಬಿಟ್ ಸಂಸ್ಥೆಗೆ ಧನ್ಯವಾದಗಳನ್ನುಸಲ್ಲಿಸಿದ್ದಾರೆ.

## “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”

### “ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳಿಗೆ ಚಟುವಟಿಕೆ”





ಜನವರಿ 11 2025 ರಂದು ಹುಮ್ನಾಬಾದ್ ತಾಲೂಕಿನ ಹೊರವಲಯದ ಆರ್ಬಿಟ್ ಸಂಸ್ಥೆಯ ಕೇಂದ್ರದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಸಂಯೋಜಕರಾದ ಶ್ರೀ ಸದಾನಂದ ರವರು ಹಾಗೂ ಶ್ರೀಮತಿ ಕವಿತಾ ರವರು ಬೆಳವಣಿಗೆಯಿಂದ ಕುಂಠಿತ ಹೊಂದಿರುವ ಎರಡು ಮಕ್ಕಳಿಗೆ ಶಬ್ದವನ್ನು ಗುರುತಿಸುವಂತಹ ಚಟುವಟಿಕೆ, ಬಣ್ಣ ಬಣ್ಣದ ವಸ್ತುಗಳನ್ನು ಹಾಗೂ ಲೈಟ್‌ಗಳನ್ನು ಉಪಯೋಗಿಸಿ ಚಟುವಟಿಕೆ ಮಾಡಿಸುವುದು, ಮೂರು ಗಾಲಿಯ ಗಾಡಿಯ ಮುಖಾಂತರ ಮಗುವಿಗೆ ನಡೆಸುವುದು, ಸಪೋರ್ಟ್ ಇಂದ ನಿಲ್ಲಿಸುವಂತಹ, ಬಲೂನ್ ಊದುವುದರ ಮುಖಾಂತರ ಮಾತನಾಡಿಸುವಂತಹ ಚಟುವಟಿಕೆ ಮಾಡಿಸಲಾಯಿತು. ಮಕ್ಕಳು ಬದಲಾವಣೆ ಹೊಂದಬೇಕಾದರೆ ಪೋಷಕರ ಸತತ ಪ್ರಯತ್ನ ಬಹಳ ಮುಖ್ಯವಾಗಿದೆ ಎಂದು ಪೋಷಕರಿಗೆ ತಿಳಿಸಲಾಯಿತು. ಒಂದು ಮಗುವಿಗೆ ಪೌಷ್ಟಿಕ ಆಹಾರವನ್ನು ವಿತರಣೆ ಮಾಡಲಾಯಿತು.

## "ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳಿಗೆ ಉಪಕೇಂದ್ರ ಆಧಾರಿತ ಚಟುವಟಿಕೆ"



ಜನವರಿ 23 ರಂದು ಹುಮ್ನಾಬಾದ್ ತಾಲೂಕಿನ ಕಲ್ಲೂರು ಗ್ರಾಮದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಎ.ಪಿ.ಡಿ ಸಂಸ್ಥೆಯ ಸಂಯೋಜಕರಾದ ಶ್ರೀ ಶ್ರೀನಾಥ್ ಸರ್ ರವರು ಕಾರ್ಯಕ್ಷೇತ್ರಕ್ಕೆ ಭೇಟಿ ನೀಡಿ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳಿಗೆ ಉಪಕೇಂದ್ರ ಆಧಾರಿತ ಚಟುವಟಿಕೆಗಳನ್ನು ಕಾರ್ಯಕರ್ತರು ಹೇಗೆ ನಿರ್ವಹಿಸುತ್ತಾರೆ ಎಂದು ಅಂಗನವಾಡಿ ಕಾರ್ಯಕರ್ತರ ಮುಖಾಂತರ ತಿಳಿದುಕೊಂಡರು. ಉತ್ತಮ ರೀತಿಯಲ್ಲಿ ಸಹಕಾರ ನೀಡುತ್ತಿದ್ದೀರಿ ಎಂದು ಅಂಗನವಾಡಿ ಕಾರ್ಯಕರ್ತರಿಗೆ ಧನ್ಯವಾದಗಳನ್ನು ತಿಳಿಸಿದರು. ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳ ಮನೆಯ ಭೇಟಿ ಮಾಡಿ ಮಕ್ಕಳ ಯೋಗಕ್ಷೇಮ ಹಾಗೂ ಅವರ ಚಟುವಟಿಕೆಗಳ ಕುರಿತು ಮಾಹಿತಿಯನ್ನು ಪೋಷಕರಿಂದ ತಿಳಿದುಕೊಂಡರು. ಜೊತೆಗೆ ಸರ್ಕಾರದಲ್ಲಿ ಸಿಗುವಂತಹ ಎಲ್ಲಾ ರೀತಿಯ ಸೌಲಭ್ಯಗಳನ್ನು ಕಾರ್ಯಕರ್ತರು ಮಕ್ಕಳಿಗೆ ತಲುಪುವಂತೆ ನೋಡಿಕೊಳ್ಳಬೇಕೆಂದು ಮಾಹಿತಿಯನ್ನು ನೀಡಿದರು. ಸರ್ಕಾರದಿಂದ ಸಿಗುವಂತಹ ವಿವಿಧ ಇಲಾಖೆಗಳಲ್ಲಿನ 5% ಬಜೆಟ್ ಕುರಿತು ಪೋಷಕರಿಗೆ ಮಾಹಿತಿಯನ್ನು ತಿಳಿಸಿದರು. ಮಕ್ಕಳ ನ್ಯೂನತೆಗೆ ಅನುಗುಣವಾಗಿ ಸೂಕ್ತವಾಗಿರುವಂತಹ ಚಟುವಟಿಕೆಗಳನ್ನು ಮಾಡಲು ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಸಂಯೋಜಕರಾದ ಶ್ರೀ ಸದಾನಂದ ಸರ್ ಅವರು ಹಾಗೂ ಕಾರ್ಯಕರ್ತರಾದ ಸೂರ್ಯಕಾಂತ್ ರವರು ಉಪಸ್ಥಿತರಿದ್ದರು.



## "ಉಚಿತ ಆರೋಗ್ಯ ಮತ್ತು ಕ್ಯಾನ್ಸರ್ ತಪಾಸಣಾ ಶಿಬಿರ"



23.01.2024 ಆರ್ಬಿಟ್ ಸಂಸ್ಥೆ ಹಾಗೂ ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಸಂಯುಕ್ತ ಆಶ್ರಯದಲ್ಲಿ ಹುಮ್ನಾಬಾದ್ ತಾಲೂಕಿನ ಸಿಂದಬಂದಗಿ ಗ್ರಾಮದಲ್ಲಿ ಉಚಿತ ಆರೋಗ್ಯ ಮತ್ತು ಕ್ಯಾನ್ಸರ್ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ತಪಾಸಣಾ ಶಿಬಿರವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಫಾ. ವಿಜಯ್ ಕುಮಾರ್, ಆರೋಗ್ಯವೇ ಭಾಗ್ಯ ಎಲ್ಲರೂ ಉತ್ತಮ ಆರೋಗ್ಯ ಹೊಂದಬೇಕು. ವ್ಯಕ್ತಿ ಎಷ್ಟೇ ಆಸ್ತಿ ಐಶ್ವರ್ಯ ಸಂಪಾದಿಸಿದರೂ ಸಹ ಉತ್ತಮ ಆರೋಗ್ಯವಿಲ್ಲದಿದ್ದರೆ ಆ ಎಲ್ಲಾ ಸಂಪತ್ತು ಶೂನ್ಯವೆಂದು ಅನಿಸುತ್ತದೆ. ಇಂದು ಅನೇಕರು ದುಶ್ಚಟಗಳಿಗೆ ಬಲಿಯಾಗಿ ಮಾರಕ ಕಾಯಿಲೆಗಳಿಗೆ ಒಳಗಾಗುತ್ತಿದ್ದಾರೆ. ಅದರಲ್ಲಿ ಕ್ಯಾನ್ಸರ್ ಕಾಯಿಲೆಯೂ ಒಂದು. ಒಂದು ಕುಟುಂಬದಲ್ಲಿ ಕ್ಯಾನ್ಸರ್ ಕಾಯಿಲೆ ಬಂತೆಂದರೆ ಇಡೀ ಕುಟುಂಬವೇ ನರಕ ಯಾತನೆಯನ್ನು ಅನುಭವಿಸಬೇಕಾಗುತ್ತದೆ. ಹಾಗಾಗಿ ಪ್ರತಿಯೊಬ್ಬರೂ ಉತ್ತಮವಾದ ಜೀವನ ಶೈಲಿಯನ್ನು ಆಯ್ಕೆ ಮಾಡಿಕೊಳ್ಳಬೇಕು. ಪ್ರತಿಯೊಬ್ಬರೂ ದುಶ್ಚಟಗಳಿಂದ ದೂರವಿರಬೇಕೆಂದು ಕಾರ್ಯಕ್ರಮದಲ್ಲಿ ಪಾಲ್ಗೊಂಡವರನ್ನು ಉದ್ದೇಶಿಸಿ ಮಾತನಾಡಿದರು. ಡಾಕುಳಿಗಿ ಪಂಚಾಯಿತಿಯ ಎಸ್.ಡಿ.ಎ ಜ್ಞಾನದೇವ ಮಾತನಾಡಿ, ಆರ್ಬಿಟ್ ಸಂಸ್ಥೆ ಮಾಡುತ್ತಿರುವ ಸಮಾಜ ಸೇವೆ ಪ್ರತಿಯೊಬ್ಬರಿಗೂ ಮಾದರಿ. ಈ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರದ ಪ್ರಯೋಜನವು ಸಿಂದಬಂದಗಿ ಗ್ರಾಮದ ಪ್ರತಿಯೊಬ್ಬ ನಾಗರಿಕರು ಪಡೆದುಕೊಳ್ಳಬೇಕು. ಡಾ.ವೀರೇಶ್ ಮಾತನಾಡಿ, ಆರೋಗ್ಯದ ಸ್ಥಿತಿ ಕೈ ಮೀರುವ ಮುಂಚೆ ತಪಾಸಣೆಗೆ ಒಳಗಾಗುವ ಮೂಲಕ ತಮ್ಮ ಆರೋಗ್ಯದ ಕುರಿತು ಅರಿವು ಹೊಂದಬೇಕು. ಇಂದಿನ ಯುವಕರು ಅನೇಕ ದುಃಖಗಳಿಗೆ ಬಲಿಯಾಗಿ ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಬೀಡಿ ಸಿಗರೇಟು ತಂಬಾಕು ಸೇವನೆಯಂತಹ ಚಟಗಳಿಗೆ ಬಲಿಯಾಗಿ ಕ್ಯಾನ್ಸರ್ ನಂತಹ ಮಹಾಮಾರಿಗೆ ಒಳಗಾಗುತ್ತಿದ್ದಾರೆ. ಅಧಿಕ ಸಂಖ್ಯೆಯ ಯುವಕರು ದುಶ್ಚಟಗಳಿಗೆ ಬಲಿಯಾಗುತ್ತಿರುವುದನ್ನು ಗಮನಿಸಿದರೆ ಆತಂಕವಾಗುವ ಸ್ಥಿತಿ ಕಂಡುಬರುತ್ತಿದೆ. ಯುವಕರು ದೇಶದ ಆಸ್ತಿ, ಯುವಕರು ಎಂದು ಉತ್ತಮ ಜೀವನ ಶೈಲಿಯನ್ನು ಅಳವಡಿಸಿಕೊಳ್ಳುವ ಮೂಲಕ ದೇಶದ ಆಸ್ತಿಯಾಗಿ ಕೊಡುಗೆ ನೀಡಬೇಕು ಎಂದು ಮಾತನಾಡಿದರು. ಈ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಒಟ್ಟು 82 ಜನ ಆರೋಗ್ಯ ತಪಾಸಣೆಯನ್ನು ಮಾಡಿಸಿಕೊಂಡರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಸದಸ್ಯರಾದ ನಾಗೇಂದ್ರ ಹಾಗೂ ಶಿವರಾಜ್, ಡಾ ಸುಶ್ಮಿತಾ, ಡಾ. ಅರ್ಬಾಜ, ಡಾ ಆಶಿಶ್, ಆಶಾ ಕಾರ್ಯಕರ್ತೆಯರಾದ ಜಗದೇವಿ, ಮುಕ್ತಾಂಬ, ಸೈಲೆನ್ಸ್ ಆಸ್ಪತ್ರೆಯಿಂದ ಅಶ್ವಿನಿ, ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಶ್ರೀ ಶ್ರೀನಿಧಿ, ಪಂಚಾಯತಿಯ ಬಿಲ್ ಕಲೆಕ್ಟರ್, ಗ್ರಾಮ ಮುಖಂಡರಾದ ದಯಾನಂದ್, ಮತ್ತಿತರರು ಉಪಸ್ಥಿತರಿದ್ದರು. ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀಮತಿ ಮಮತಾ, ಶ್ರೀ ಅರುಣ್ ಕುಮಾರ್ ಎಸ್, ಶ್ರೀ ಡಿವಿಡ್, ಸ್ಪರ್ಶ ಕ್ಯಾನ್ಸರ್ ಯೋಜನೆಯ ಸಂಯೋಜಕರಾದ ಶ್ರೀ ಯೋಹಾನ, ಶ್ರೀ ಅರುಣ್ ಕುಮಾರ್ ಕೋಟೆ ಉಪಸ್ಥಿತರಿದ್ದು ಕಾರ್ಯಕ್ರಮದ ವ್ಯವಸ್ಥಾಪನೆಯನ್ನು ಮಾಡಿದರು. ಶ್ರೀ ಯೋಹಾನ್ ಪ್ರಾರ್ಥಿಸಿದರು. ಶ್ರೀಮತಿ ಮಮತಾ ನಿರೂಪಿಸಿ, ಶ್ರೀ ಅರುಣ್ ಕುಮಾರ್ ರಂಜೇರಿ ವಂದಿಸಿದರು.





## "ನವಜೀವನ (ಎಲ್. ಎಲ್. ಎಲ್.ಎಫ್) ಕಾರ್ಯಕ್ರಮ"

## "ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ"

ದಿನಾಂಕ 06–01–2025 ರಂದು ಔರಾದ್ ತಾಲೂಕಿನ ಧುಪತಮಹಾಗಾವ್ ಗ್ರಾಮದ ಸಂಘದ ಜನರಿಗೆ ಆರ್ಬಿಟ್ ಸಂಸ್ಥೆ ಮತ್ತು ನವಜೀವನ Live Love Laugh Foundation ಸಂಯುಕ್ತಾಶ್ರಯದಲ್ಲಿ ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ ನೀಡಲಾಯಿತು. ಸಂಪನ್ಮೂಲ ವ್ಯಕ್ತಿ ಶ್ರೀ Yohan ರವರು ಸಂಘದ ಜನರಿಗೆ ಜಾಗೃತಿ ಮೂಡಿಸುತ್ತ ಮಾತನಾಡಿ, ಆರೋಗ್ಯ ಎಂದರೆ. ದೈಹಿಕವಾಗಿ, ಮಾನಸಿಕವಾಗಿ, ಶರೀರಕವಾಗಿ, ಮತ್ತು ಸಾಮಾಜಿಕವಾಗಿ ಚೆನ್ನಾಗಿರುವುದೇ ಪರಿಪೂರ್ಣ ಆರೋಗ್ಯ. ಮಾನಸಿಕ ಅಸ್ವಸ್ಥತೆ ಎಂದರೆ, ಇದು ಒಂದು ಮೆದುಳಿನ ಕಾಯಿಲೆ, ಮೆದುಳಿನ ರಾಸಾಯನಿಕ ಕ್ರಿಯೆಯಲ್ಲಿ ಏರುಪೇರಾಗಿ ಮನುಷ್ಯನ ವರ್ತನೆಯಲ್ಲಿ ಬದಲಾವಣೆಯಾಗಿ, ತನ್ನ ದಿನನಿತ್ಯದ ಚಟುವಟಿಕೆಗಳಲ್ಲಿ ತೊಡಕು ಉಂಟಾಗುವುದನ್ನು ಮಾನಸಿಕ ಅಸ್ವಸ್ಥತೆ ಎಂದು ಹೇಳುತ್ತೇವೆ. ಕಾಯಿಲೆಯ ಲಕ್ಷಣಗಳು ಭಯ, ಆತಂಕ, ಖಿನ್ನತೆ, ಇತ್ಯಾದಿ ಲಕ್ಷಣಗಳಿದ್ದರೆ ಮನೋವೈದ್ಯರ ಬಳಿ ಚಿಕಿತ್ಸೆ ಪಡೆಯುವುದರ ಮೂಲಕ ಗುಣಪಡಿಸಬಹುದು. ಸಮುದಾಯದಲ್ಲಿ ಮಾನಸಿಕ ಅಸ್ವಸ್ಥರು ಕಂಡರೆ ಅವರನ್ನು ನಿರ್ಲಕ್ಷಿಸದೆ ಸಹಾಯ ಮಾಡುವ ಭಾವನೆ ನಿಮ್ಮದಾಗಬೇಕು ಎಂದು ಹೇಳಿದರು. ನಮ್ಮ ಸಂಸ್ಥೆಯ ಸಹಾಯವಾಣಿ ಸಂಖ್ಯೆ 9036664271 ಕ್ಕೆ ಮಾಹಿತಿ ನೀಡುವುದು. ಕ್ಯಾನ್ಸರ್ ಕಾಯಿಲೆ ಯಾರಿಗೆ ಬೇಕಾದರೂ ಬರುವುದು ಇದರ ಲಕ್ಷಣಗಳು ಕಂಡು ಬಂದಲ್ಲಿ ವೈದ್ಯರ ಸಲಹೆ ಪಡೆಯುವುದು ಉತ್ತಮ. ಹಾಗೆ ಈ ರೋಗವು ಶರೀರದ ಯಾವುದೇ ಭಾಗಕ್ಕಾದರೂ ಬರಬಹುದು ಎಂದು ತಿಳಿಸಿದರು. ಇದರಲ್ಲಿ 10 ಸದಸ್ಯರು ಭಾಗವಹಿಸಿದ್ದರು.



## “ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಾನಸಿಕ ಅಸ್ವಸ್ಥತೆಜಾಗೃತಿ ಕಾರ್ಯಕ್ರಮ”



ದಿನಾಂಕ 06–01–2025 ರಂದು ಹುಲಸೂರ ತಾಲೂಕಿನ ತೋಗಲೂರ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ Live Love Laugh Foundation ಸಂಯುಕ್ತಾಶ್ರಯದಲ್ಲಿ ಸಂಪನ್ಮೂಲ ವ್ಯಕ್ತಿ ಶ್ರೀ ಅಮರ ರವರು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುತ್ತಾ ಮಾತನಾಡಿ, ದೈಹಿಕವಾಗಿ, ಮಾನಸಿಕವಾಗಿ, ಶರೀರಕವಾಗಿ ಮತ್ತು ಸಾಮಾಜಿಕವಾಗಿ ಚೆನ್ನಾಗಿರುವುದೇ ಪರಿಪೂರ್ಣ ಆರೋಗ್ಯ.ಮಾನಸಿಕ ಅಸ್ವಸ್ಥತೆ ಎಂದರೆ, ಇದು ಒಂದು ಮೆದುಳಿನ ಕಾಯಿಲೆ, ಮೆದುಳಿನ ರಾಸಾಯನಿಕ ಕ್ರಿಯೆಯಲ್ಲಿ ಏರುಪೇರಾಗಿ ಮನುಷ್ಯನ ವರ್ತನೆಯಲ್ಲಿ ಬದಲಾವಣೆಯಾಗಿ, ತನ್ನ ದಿನನಿತ್ಯದ ಚಟುವಟಿಕೆಗಳಲ್ಲಿ ತೊಡಕು ಉಂಟಾಗುವುದನ್ನು ಮಾನಸಿಕ ಅಸ್ವಸ್ಥತೆ ಎಂದು ಹೇಳುತ್ತೇವೆ. ಕಾಯಿಲೆಯ ಲಕ್ಷಣಗಳು ಭಯ, ಆತಂಕ, ಖಿನ್ನತೆ, ಅಳುವುದು.ನಗುವುದು, ಅನುಮಾನ, ಯಾರಿಗೂ ಕೇಳಿಸದ ಶಬ್ದ ಅವರಿಗೆ ಕೇಳಿಸುವುದು ಇತ್ಯಾದಿ ಲಕ್ಷಣಗಳಿದ್ದರೆ, ಮನೋವೈದ್ಯರ ಬಳಿ ಚಿಕಿತ್ಸೆ ನೀಡುವುದರ ಮೂಲಕ ಗುಣಪಡಿಸಬಹುದು. ಸಮುದಾಯದಲ್ಲಿ ಮಾನಸಿಕ ಅಸ್ವಸ್ಥರು ಕಂಡರೆ ಅವರನ್ನು ನಿರ್ಲಕ್ಷಿಸದೆ ಸಹಾಯ ಮಾಡುವ ಭಾವನೆ ನಿಮ್ಮದಾಗಬೇಕು ಎಂದು ಹೇಳಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ 05 ಜನ ಶಿಕ್ಷಕ ವೃಂದದವರು ಸೇರಿ ಒಟ್ಟು 100 ವಿದ್ಯಾರ್ಥಿಗಳು ಭಾಗವಹಿಸಿದರು.

## “ಮಾನಸಿಕ ಅಸ್ವಸ್ಥರ ಆರೈಕೆದಾರರ ಸಂಘ”



ದಿನಾಂಕ 04–01–2025 ರಂದು ಬೀದರ್ ತಾಲೂಕಿನ ದದ್ದಾಪುರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ Live Love Laugh Foundation ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ. ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಆನಂದ ರವರು ಮಾನಸಿಕ ಅಸ್ವಸ್ಥರ ಆರೈಕೆದಾರರ ಸಂಘವನ್ನು ರಚಿಸಿ ಮಾತನಾಡಿ, ಆರೈಕೆದಾರರ ಸಂಘ ರಚಿಸುವ ಉದ್ದೇಶ, ಎಲ್ಲರಲ್ಲಿ ಒಗ್ಗಟ್ಟು ಮತ್ತು ಐಕ್ಯತೆಯ ಭಾವನೆ ಬರುತ್ತದೆ.ತಮ್ಮ ಭಾವನೆಗಳನ್ನು ಹಂಚಿಕೊಳ್ಳಬಹುದು, ಮಾನಸಿಕ ಅಸ್ವಸ್ಥರನ್ನು ಹೇಗೆ ಆರೈಕೆಮಾಡಬೇಕು ಎಂಬುದನ್ನು ತಿಳಿದುಕೊಳ್ಳಬಹುದು.ಶೇಕಡಾ 16% ಆರೈಕೆದಾರರು ಭಾವನಾತ್ಮಕ ಒತ್ತಡವನ್ನು ಅನುಭವಿಸುತ್ತಾರೆ.ಶೇಕಡಾ 26% ಮಾನಸಿಕ ಅಸ್ವಸ್ಥರನ್ನು ಕಾಳಜಿವಹಿಸಲು ಕಷ್ಟಪಡುತ್ತಾರೆ.ಮಾನಸಿಕ ಅಸ್ವಸ್ಥತೆ ಕುರಿತು ಇರುವ ಮೂಢನಂಬಿಕೆ, ಕಳಂಕ, ಅಸಮಾನತೆಯನ್ನು ಹೋಗಲಾಡಿಸಬಹುದು, ಕುಂದುಕೊರತೆ ಬಗ್ಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಬಹುದು.ಮಾನಸಿಕ ಅಸ್ವಸ್ಥರನ್ನು ಕಡೆಗಣಿಸದೆ ಪ್ರೀತಿಯಿಂದ ಆರೈಕೆಮಾಡಬೇಕು.ಪ್ರತಿ ತಿಂಗಳು ನಡೆಯುವ ಸಭೆಯಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು ಎಂದು ತಿಳಿಸಿದರು.ಈ ಆರೈಕೆದಾರರ ಸಭೆಯಲ್ಲಿ 04 ಸದಸ್ಯರು ಭಾಗವಹಿಸಿದ್ದರು.

## “ಪಾಲಕ ಪೋಷಕರ ಸಂಘ ರಚನೆ”



ದಿನಾಂಕ 01–01–2025 ರಂದು ಹಮಿಲಾಪುರ ಗ್ರಾಮದಲ್ಲಿ ನವಜೀವನ LLLF ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣ್ ರವರು ತಾಲಿಬಾನ್ ಎಂಬ ಹೆಸರಿನ ಪಾಲಕ ಪೋಷಕರ ಸಂಘ ರಚನೆ ಮಾಡಿದರು.ಈ ಸಂಘದಲ್ಲಿ ಐದು ಜನ ಫಲಾನುಭವಿಗಳಿದ್ದರು. ಮೊದಲಿಗೆ ಹೊಸ ವರ್ಷದ ಶುಭಾಶಯ ಕೋರಿ, ಈ ಗುಂಪು ರಚನೆ ಮಾಡಿದ್ದು ಉದ್ದೇಶವೇನೆಂದರೆ ನಿಮ್ಮ ಒಂದು ಗುಂಪಲ್ಲಿ ಏನೇ ಸಮಸ್ಯೆ ಇದ್ದರೂ ಅಥವಾ ನಿಮ್ಮ ಫಲಾನುಭವಿಗೆ ಮಾತ್ರೆಗಳನ್ನು ಸರಿಯಾಗಿ ಸಿಗುತ್ತಿಲ್ಲ ಅಂದರೆ ಹಾಗು ಸರ್ಕಾರದ ಸೌಲಭ್ಯಗಳಿದ್ದರೂ ನಾವು ನಿಮಗೆ ತಿಳಿಸಿ ನಿಮಗೆ ಎಲ್ಲಾ ಸೌಲಭ್ಯಗಳು ದೊರಕುವ ಹಾಗೆ ನೋಡಿಕೊಳ್ಳುತ್ತೇನೆ ಎಂದು ಧೈರ್ಯ ತುಂಬಿಸಿದರು. ಹಾಗು ನಿಮ್ಮ ಕುಟುಂಬದವರ ಪ್ರತಿಯೊಬ್ಬರ ಸರ್ಕಾರದ ವಿವಿಧ ಸೌಲಭ್ಯಗಳನ್ನು ಪಡೆಯಲು ಪ್ರಯತ್ನಮಾಡಬೇಕು ಎಂದು ತಿಳಿಸಿ, ಈ ಗುಂಪನ್ನು ರಚನೆ ಮಾಡಲಾಯಿತು.

## “ಸರಕಾರಿ ಪ್ರೌಢ ಶಾಲೆಯ ಮಕ್ಕಳಿಗೆ ಮಾನಸಿಕ ಅಸ್ವಸ್ಥತೆಯ ಬಗ್ಗೆ ಜಾಗೃತಿ”




ದಿನಾಂಕ 06/01/25 ರಂದು ಬಸವಕಲ್ಯಾಣ ತಾಲೂಕಿನ ಕಿಟ್ಟ ಗ್ರಾಮದಲ್ಲಿ, ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀಮತಿ ಸುಜಾತಾ ಅವರು ಸರಕಾರಿ ಪ್ರೌಢ ಶಾಲೆಯ ಮಕ್ಕಳಿಗೆ ಮಾನಸಿಕ ಅಸ್ವಸ್ಥತೆಯ ಬಗ್ಗೆ ಜಾಗೃತಿಕ ಮೂಡಿಸಲಾಯಿತು.ಮಾನಸಿಕ ಅಸ್ವಸ್ಥತೆಗೆಕಾರಣಗಳು, ಚಿಕಿತ್ಸೆಯ ಬಗ್ಗೆ ಅರಿವು ಮೂಡಿಸಲಾಯಿತು. ಅದು ದೈಹಿಕವಾಗಿಯೂ, ಮಾನಸಿಕವಾಗಿಯೂ, ಶಾರೀರಿಕವಾಗಿಯೂ, ಮತ್ತು ಸಾಮಾಜಿಕವಾಗಿಯೂ ಚೆನ್ನಾಗಿರುವುದೇ ಆರೋಗ್ಯ, ಈ ಕಾಯಿಲೆಯು ಒಂದು ಮೆದುಳಿನ ಕಾಯಿಲೆಯಾಗಿದ್ದು, ಮೆದುಳಿನ ರಾಸಾಯನಿಕ ಕ್ರಿಯೆಯಲ್ಲಿ ಏರುಪೇರು ಆಗಿ ಮನುಷ್ಯನ ವರ್ತನೆಯಲ್ಲಿ ಬದಲಾವಣೆಯನ್ನು ಕಂಡು ಬರುತ್ತದೆ ಅದು ತನ್ನ ದಿನನಿತ್ಯದ ಚಟುವಟಿಕೆಗಳಲ್ಲಿ ಏರುಪೇರು ಆಗುವುದನ್ನು ಮಾನಸಿಕ ಅಸ್ವಸ್ಥತೆ ಎಂದು ಹೇಳುತ್ತೇವೆ. ಈ ಕಾಯಿಲೆಗೆ ಚಿಕಿತ್ಸೆ ಇದೆ, ಸತತವಾಗಿ ಚಿಕಿತ್ಸೆ ನೀಡುವುದರ ಮೂಲಕ ಕಾಯಿಲೆಯೂ ಗುಣಪಡಿಸಬಹುದು. ಮಾನಸಿಕ ಅಸ್ವಸ್ಥತೆ ಹೊಂದಿದ್ದ ವ್ಯಕ್ತಿಯನ್ನು ಕಂಡರೆ ನಿರ್ಲಕ್ಷಿಸದೆ ನಮ್ಮ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಬೇಕು.9036664271 ಹೀಗೆ ಮಕ್ಕಳಿಗೆ ಮತ್ತು ಸಹಶಿಕ್ಷಕರಿಗೆ ಕಾರ್ಯಕ್ರಮದ ಬಗ್ಗೆ ಅರಿವನ್ನು ನುಡಿಸಲಾಯಿತು.ಒಟ್ಟು 149 ಜನ ಭಾಗವಹಿಸಿದ್ದರು.

## “ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಾನಸಿಕ ಅಸ್ವಸ್ಥತೆ ಜಾಗೃತಿ”



ದಿನಾಂಕ 06–01–2025 ರಂದು ಬಸವಕಲ್ಯಾಣ ತಾಲೂಕಿನ ಧನ್ನೂರ್ ಕೆ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಯಲ್ಲಿ Live Love Laugh Foundation ಸಂಯುಕ್ತಾಶ್ರಯದಲ್ಲಿ ಸಂಪನ್ಮೂಲ ವ್ಯಕ್ತಿ ಶ್ರೀ ಆಕಾಶ್ ರವರು ವಿದ್ಯಾರ್ಥಿಗಳಿಗೆ ಜಾಗೃತಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಯಲ್ಲಿ ಮೂಡಿಸುತ್ತಾ ಮಾತನಾಡಿ, ದೈಹಿಕವಾಗಿ, ಮಾನಸಿಕವಾಗಿ, ಶರೀರಕವಾಗಿ, ಮತ್ತು ಸಾಮಾಜಿಕವಾಗಿ ಚೆನ್ನಾಗಿರುವುದೇ ಪರಿಪೂರ್ಣ ಆರೋಗ್ಯ. ಮಾನಸಿಕ ಅಸ್ವಸ್ಥತೆ ಎಂದರೆ, ಇದು ಒಂದು ಮೆದುಳಿನ ಕಾಯಿಲೆ, ಮೆದುಳಿನ ರಾಸಾಯನಿಕ ಕ್ರಿಯೆಯಲ್ಲಿ ಏರುಪೇರಾಗಿ ಮನುಷ್ಯನ ವರ್ತನೆಯಲ್ಲಿ ಬದಲಾವಣೆಯಾಗಿ, ತನ್ನ ದಿನನಿತ್ಯದ ಚಟುವಟಿಕೆಗಳಲ್ಲಿ ತೊಡಕು ಉಂಟಾಗುವುದನ್ನು ಮಾನಸಿಕ ಅಸ್ವಸ್ಥತೆ ಎಂದು ಹೇಳುತ್ತೇವೆ. ಕಾಯಿಲೆಯ ಲಕ್ಷಣಗಳು ಭಯ, ಆತಂಕ, ಖಿನ್ನತೆ, ಇತ್ಯಾದಿ ಲಕ್ಷಣಗಳಿದ್ದರೆ, ಮನೋವೈದ್ಯರ ಬಳಿ ಚಿಕಿತ್ಸೆ ನೀಡುವುದರ ಮೂಲಕ ಗುಣಪಡಿಸಬಹುದು. ಸಮುದಾಯದಲ್ಲಿ ಮಾನಸಿಕ ಅಸ್ವಸ್ಥರು ಕಂಡರೆ ಅವರನ್ನು ನಿರ್ಲಕ್ಷಿಸದೆ ಸಹಾಯ ಮಾಡುವ ಭಾವನೆ ನಿಮ್ಮದಾಗಬೇಕು ಎಂದು ಹೇಳಿದರು.ಈ ಜಾಗೃತಿ ಕಾರ್ಯಕ್ರಮದಲ್ಲಿ 06 ಶಿಕ್ಷಕಿಯರು ಸೇರಿ ಒಟ್ಟು 56 ವಿದ್ಯಾರ್ಥಿಗಳು ಭಾಗವಹಿಸಿದರು.

## “ಮಾನಸಿಕ ಅಸ್ವಸ್ಥರ ಪಾಲಕರ ಹೊಸ ಗುಂಪು ರಚನೆ”



ದಿನಾಂಕ 09/01/2025 ರಂದು ಬೀದರ ತಾಲೂಕಿನ ಸುಲ್ತಾನಪುರ ಗ್ರಾಮದಲ್ಲಿ ಮಾನಸಿಕ ಅಸ್ವಸ್ಥರ ಪಾಲಕರ ಹೊಸ ಗುಂಪು ರಚನೆ ಮಾಡಲಾಯಿತು.ಈ ಗುಂಪಿಗೆ ಸುಲ್ತಾನ ಎಂಬ ಹೆಸರಿಡಲಾಯಿತು.ಈ ಸಭೆಯಲ್ಲಿ ಮಾನಸಿಕ ಅಸ್ವಸ್ಥರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳಾದ.udid card ಮತ್ತು ಆರೋಗ್ಯ ವಿಮೆ ಯೋಜನೆ ಕಾರ್ಡ್ ಕುರಿತು ಹಾಗೂ ಎಲ್ಲಾ ಫಲಾನುಭವಿಗಳಿಗೆ ಸರಿಯಾಗಿ ಆರೈಕೆ ಮಾಡುವಂತೆ ತಿಳಿಸಲಾಯಿತು. ನಿಮ್ಮ ಗುಂಪಲ್ಲಿ ಯಾರಿಗೆ ಸರ್ಕಾರದ ಸೌಲಭ್ಯಗಳು ದೊರಕುತ್ತಿಲ್ಲ ನಮಗೆ ತಿಳಿಸುವುದು ಎಂದು ನವಜೀವನ LLLF ಕಾರ್ಯಕ್ರಮದ ಕಾರ್ಯಕರ್ತರಾದ ಅರುಣ ರವರಿಂದ ಸಂಪೂರ್ಣ ಮಾಹಿತಿ ನೀಡಿ ಹೊಸ ಸಭೆ ರಚನೆ ಮಾಡಲಾಯಿತು.ಈ ಗುಂಪಿನಲ್ಲಿ 5 ಜನರು ಭಾಗ ವಹಿಸಿದರು.

## “ಮುರಾರ್ಜಿ ವಸತಿ ಶಾಲೆಯ ಮಕ್ಕಳಿಗೆ ಮಾನಸಿಕ ರೋಗದ ಬಗ್ಗೆ ಮಾಹಿತಿ”



ಭಾಲ್ಕಿ ತಾಲೂಕಿನ ಮುರಾರ್ಜಿ ವಸತಿ ಶಾಲೆಯ ಮಕ್ಕಳಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಮಾನಸಿಕ ರೋಗದ ಬಗ್ಗೆ ಮಾಹಿತಿ ರೋಗದ ಲಕ್ಷಣ ಹಾಗೂ ಮಾನಸಿಕ ರೋಗಕ್ಕೆ ಸಿಗುವ ಚಿಕಿತ್ಸೆಯ ಬಗ್ಗೆ ತಿಳಿಸಿ ಹೇಳಲಾಯಿತು, ಅದರ ಜೊತೆಗೆ ಡಿ.ಎಮ.ಹೆಚ್.ಪಿ ಕ್ಯಾಂಪ್ನಲ್ಲಿ ದೊರೆಯುವ ಚಿಕಿತ್ಸೆ ಹಾಗೂ ಪ್ರತಿ ತಿಂಗಳ ಎರಡನೇ ಮಂಗಳವಾರ ಸರ್ಕಾರಿ ಆಸ್ಪತ್ರೆಯಲ್ಲಿ ಡಿ.ಎಮ.ಹೆಚ್.ಪಿ ಕ್ಯಾಂಪ್ ನಡೆಸಲಾಗುವುದು, ಡಿ.ಎಮ.ಹೆಚ್.ಪಿ ಕ್ಯಾಂಪ್ ಅನ್ವಯದಲ್ಲಿ ಮಾನಸಿಕ ರೋಗಿಗೆ ಅಸೆಸ್ಮೆಂಟ್ ಮಾಡಲಾಗುವುದು, ಡಿ.ಎಮ.ಎಚ್.ಪಿ ಕ್ಯಾಂಪನ್ ಸದುಪಯೋಗ ಪಡೆದುಕೊಳ್ಳುವಂತೆ ತಿಳಿಹೇಳಲಾಯಿತು, ಜೊತೆಗೆ ಟೆಲಿ ಮಾನಸ ಸಹಾಯವಾಣಿಯಾದ 14416 ಮಾಹಿತಿಯನ್ನು ನೀಡಿ ಕರೆ ಮಾಡಲು ತಿಳಿಸಲಾಯಿತು.

## “ಮಾನಸಿಕ ಅಸ್ವಸ್ಥ ಮತ್ತು ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ”



ಜನೆವರಿ 18.2025 ರಂದು ಔರಾದ್ ತಾಲೂಕಿನ ಹೆಡ್ಗಾಪುರ್ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಮತ್ತು LLLF ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥ ಮತ್ತು ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ ನೀಡಲಾಯಿತು. ಮಾನಸಿಕ ಕಾಯಿಲೆ ಹೇಗೆ ಬರುತ್ತದೆ, ಅದನ್ನು ಹೇಗೆ ಗುಣಪಡಿಸಬಹುದು, ಮತ್ತು ಹೇಗೆ ಪತ್ತೆ ಹಚ್ಚುವುದು, ಮಾನಸಿಕ ರೋಗವು ಒಂದು ಮೆದುಳಿನ ರೋಗವಾಗಿದೆ ಮೆದುಳಿನಲ್ಲಿರುವ ರಾಸಾಯನಿಕ ಕ್ರಿಯೆಗಳಲ್ಲಿ ಏರುಪೇರು ಉಂಟಾದಾಗ ಆ ವ್ಯಕ್ತಿಯು ಈ ರೋಗಕ್ಕೆ ತುತ್ತಾಗುತ್ತಾನೆ, ಅವನ ಲಕ್ಷಣಗಳೆಂದರೆ ಬೈಯುವುದು, ಕಾರಣವಿಲ್ಲದೆ ಅಳುವುದು, ವಿನಾಕಾರಣ ನಗುವುದು, ಬೀದಿ ಸುತ್ತುವುದು, ಇತ್ಯಾದಿ. ಇಂತಹ ವ್ಯಕ್ತಿಯನ್ನು ಸೂಕ್ತ ಸಮಯದಲ್ಲಿ ಪತ್ತೆ ಹಚ್ಚಿ ಸಮಯಕ್ಕೆ ತಕ್ಕ ಹಾಗೆ ಚಿಕಿತ್ಸೆ ನೀಡುವುದರಿಂದ ಅವನು ಗುಣಮುಖನಾಗುತ್ತಾನೆ ಎಂದು ಜಾಗೃತಿ ಮೂಡಿಸಲಾಯಿತು, ಈ ಕಾರ್ಯಕ್ರಮದಲ್ಲಿ 15 ಆಶಾ ಕಾರ್ಯಕರ್ತರು ಭಾಗಿಯಾಗಿದ್ದರು.

## “ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಾನಸಿಕ ಅಸ್ವಸ್ಥತೆಯ ಬಗ್ಗೆ ಜಾಗೃತಿ”



ದಿನಾಂಕ 20/01/2025 ರಂದು ಬೀದರ್ ತಾಲೂಕಿನ ಚಿಟ್ಟಾ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಅರುಣ್ ರವರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಾನಸಿಕ ಅಸ್ವಸ್ಥತೆಯ ಬಗ್ಗೆ ಜಾಗೃತಿ ಮೂಡಿಸಲಾಯಿತು.ಅದರಲ್ಲಿ ಮಾನಸಿಕ ಅಸ್ವಸ್ಥತೆ ಎಂದರೇನು, ಮಾನಸಿಕ ಅಸ್ವಸ್ಥತೆಯ ಲಕ್ಷಣಗಳು, ಮತ್ತು ಮಾನಸಿಕ ಅವರನ್ನು ಯಾವ ರೀತಿ ಪತ್ತೆಹಚ್ಚಬೇಕು ಎಂಬುದಾಗಿ ತಿಳಿಸಲಾಯಿತು.ಈ ರೋಗ ಒಂದು ಮೆದುಳಿನ ಕಾಯಿಲೆಯಾಗಿದೆ ಇದು ಕೇವಲ ಬಡವರಿಗೆ ಮಾತ್ರವಲ್ಲದೆ ಚಿಕ್ಕವರಿಂದ ದೊಡ್ಡವರವರೆಗೂ ಯಾರಿಗೂ ಬರಬಹುದು. ನಾವು ಈ ಒಂದು ಸಮಸ್ಯೆಗೆ ಒಳಗಾಗದೆ ನಾವು ಪರಿಸರಕ್ಕೆ ಅನುಗುಣವಾಗಿ ಹೊಂದಿಕೊಂಡು ಯಾವುದೇ ಒಂದು ವಿಷಯದಲ್ಲಿ ಮುಳುಗಿ ಹೋಗದ ಹಾಗೆ ನಮ್ಮ ಆರೋಗ್ಯದ ಕಡೆ ಗಮನ ಕೊಡಬೇಕು ಎಂದು ಎಚ್ಚರಿಸಿದರು. ಪತ್ತೆ ಹಚ್ಚಿದ ಮಾನಸಿಕ ಅಸ್ವಸ್ಥರನ್ನು ಮೂಢನಂಬಿಕೆಗೆ ಒಳಗಾಗದೆ ಆದಷ್ಟು ಬೇಗ ಚಿಕಿತ್ಸೆಗೆ ಒಳಪಡಿಸಬೇಕೆಂದು ಚಿಕಿತ್ಸೆ ಬಗ್ಗೆ ಅರಿವು ಮೂಡಿಸಲಾಯಿತು.ಮತ್ತು ಮಾನಸಿಕ ಅಸ್ವಸ್ಥರಾಗಿದ್ದು ಬದಲಾವಣೆ ಆದ ಫಲಾನುಭವಿಯ ವೀಡಿಯೋಗಳನ್ನು ತೋರಿಸಿ ನಂಬಿಕೆ ಮೂಡಿಸಲಾಯಿತು.ಈ ಕಾರ್ಯಕ್ರಮದಲ್ಲಿ 20 ಜನ ಮಕ್ಕಳು 2 ಜನ ಶಿಕ್ಷಕರಿದ್ದು ಒಟ್ಟು 22 ಜನ ಭಾಗವಹಿಸಿದ್ದರು.

## “ಶಾಲೆಯ ಶಿಕ್ಷಕರು ಮತ್ತು ಮಕ್ಕಳನ್ನು ಮಾನಸಿಕ ಆರೋಗ್ಯದ ಕುರಿತು ಜಾಗ್ರತಿಕ ಕಾರ್ಯಕ್ರಮ”



ದಿನಾಂಕ 24/01/2025 ರಂದು ಬಸವಕಲ್ಯಾಣ ತಾಲೂಕಿನ ಇಲ್ಲಾಳ ಗ್ರಾಮದ ಸರಕಾರಿ ಶಾಲೆಯಲ್ಲಿ ನವಜೀವನ LLLF ಕಾರ್ಯಕ್ರಮದ ಕಾರ್ಯಕರ್ತರಾದ ಸುಜಾತ ಅವರು ಶಾಲೆಯ ಶಿಕ್ಷಕರು ಮತ್ತು ಮಕ್ಕಳನ್ನು ಮಾನಸಿಕ ಆರೋಗ್ಯದ ಕುರಿತು ಜಾಗ್ರತಿಕ ಕಾರ್ಯಕ್ರಮವನ್ನು ಮಾಡಲಾಯಿತು.ಮಾನಸಿಕ ಕಾಯಿಲೆ ಎಂದರೇನು ಮಾನಸಿಕ ಕಾಯಿಲೆಯ ಲಕ್ಷಣಗಳು, ಮಾನಸಿಕ ಕಾಯಿಲೆಯ ಕಾರಣಗಳು, ಮತ್ತು ಚಿಕಿತ್ಸೆಯ ಕುರಿತು ಸಂಪೂರ್ಣವಾಗಿ ವಿವರಿಸುತ್ತಾ, ದೈಹಿಕವಾಗಿ, ಮಾನಸಿಕವಾಗಿ, ಮತ್ತು ಶಾರೀರಿಕವಾಗಿ ಹಾಗೂ ಸಾಮಾಜಿಕವಾಗಿ ಚೆನ್ನಾಗಿರುವುದೇ ಪರಿಪೂರ್ಣ ಆರೋಗ್ಯ.ಮಾನಸಿಕ ಅಸ್ವಸ್ಥತೆ ಎಂದರೆ ಇದು ಒಂದು ಮೆದುಳಿನ ಕಾಯಿಲೆ ರಾಸಾಯನಿಕ ಕ್ರಿಯೆಯಲ್ಲಿ ಏರುಪೇರು ಆಗಿ ಮನುಷ್ಯನ ವರ್ತನೆಯಲ್ಲಿ ಬದಲಾವಣೆಯನ್ನಾಗಿ ಕಾಣುತ್ತದೆ.ತನ್ನ ದಿನ ನಿತ್ಯದ ಚಟುವಟಿಕೆಗಳಲ್ಲಿ ತೊಡಕು ಉಂಟಾಗುವುದನ್ನು ಮಾನಸಿಕ ಅಸ್ವಸ್ಥತೆ ಎಂದು ಹೇಳುತ್ತೇವೆ. ಹೀಗೆ ಈ ಮಾನಸಿಕ ಕಾಯಿಲೆಗೆ ಸೂಕ್ತವಾದ ಚಿಕಿತ್ಸೆ ಇದೆ. ಇದು ಸತತವಾಗಿ ಮಾತ್ರೆಗಳನ್ನು ಸೇವಿಸ್ತಾ ಬಂದರೆ ಕಾಯಿಲೆಯು ಗುಣವಾಗುತ್ತದೆ.ಮತ್ತು ಪ್ರತಿ ಮಂಗಳವಾರದಂದು ತಾಲೂಕ ಆಸ್ಪತ್ರೆಯಲ್ಲಿ ತಪಾಸಣೆ ನಡೆಯುತ್ತದೆ.ಹೀಗೆ ಮಾನಸಿಕ ಅಸ್ವಸ್ಥತೆ ಹೊಂದಿದ್ದ ವ್ಯಕ್ತಿಯನ್ನು, ನಿಮ್ಮ ಅಕ್ಕಪಕ್ಕದಲ್ಲಿ ಕಂಡರೆ ನಮ್ಮ ಸಹಾಯವಾಣಿ ಸಂಖ್ಯೆಗೆ 9036664271 ಕರೆ ಮಾಡಿ ಎಂದು ತಿಳಿಸುತ್ತಾ ಈ ಜಾಗ್ರತಿಕ ಕಾರ್ಯಕ್ರಮದಲ್ಲಿ ಒಟ್ಟು 40 ಜನರು ಭಾಗವಹಿಸಿದ್ದರು.

## “ಕ್ಯಾನ್ಸರ್ ಜಾಗೃತಿ ಕುರಿತು ಅರಿವು”



ದಿನಾಂಕ 3/2/2025 ರಂದು ಕಮಾಲ್ನಾಗರ್ ತಾಲೂಕಿನ ತಪ್ಪಲ ಎಂಬ ಗ್ರಾಮದಲ್ಲಿ ಗ್ರಾಮಸ್ಥರನ್ನು ನವಜೀವನ LLLF ಕಾರ್ಯಕ್ರಮದ ಕಾರ್ಯಕರ್ತರಾದ ಸಂಗೀತಾ ರವರಿಂದ ಕ್ಯಾನ್ಸರ್ ಅರಿವು ಮೂಡಿಸಲಾಯಿತು.ಕ್ಯಾನ್ಸರ್ ಎಂದರೇನು?ಅದರ ವಿಧಗಳು ಹಾಗೂ ಲಕ್ಷಣಗಳು ಹಾಗೂ ಕ್ಯಾನ್ಸರನ್ನು ಹೇಗೆ ತಡೆಯಬಹುದು ಎಂದು ಸಲಹೆಗಳು ತಿಳಿಸಿ ಹೇಳಲಾಯಿತು.ಈ ಕಾರ್ಯಕ್ರಮದಲ್ಲಿ ಒಟ್ಟು 10 ಜನರು ಭಾಗವಹಿಸಿದರು.

## “ಅಂಗನವಾಡಿ ಕಾರ್ಯಕರ್ತೆಯರಿಗೆ ಸಹಭಾಗಿತ್ವದಾರರ ತರಬೇತಿ”



ಜನವರಿ 24 ರಂದು ಬಸವಕಲ್ಯಾಣ ತಾಲೂಕಿನ ಉಜಳಂಬ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ವಲಯ ಮಟ್ಟದ ಅಂಗನವಾಡಿ ಕಾರ್ಯಕರ್ತೆಯರಿಗೆ ಸಹಭಾಗಿತ್ವದಾರರ ತರಬೇತಿಯನ್ನು ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ನಡೆಸಲಾಯಿತು, ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿಜಯಕುಮಾರ್ ಅವರು ಮಾತನಾಡಿ, ಮಾನಸಿಕ ಆರೋಗ್ಯ ಎಂದರೇನು? ಈ ಕಾಯಿಲೆಯ ಲಕ್ಷಣಗಳು ಮತ್ತು ಕಾಯಿಲೆಗೆ ಕಾರಣಗಳು ತಿಳಿಸಿ, ಮಾನಸಿಕ ಕಾಯಿಲೆಗೆ ಒಳಗಾದ ವ್ಯಕ್ತಿಯನ್ನು ಪ್ರಾಥಮಿಕವಾಗಿ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಆಶಾ ಕಾರ್ಯಕರ್ತರ ಮೂಲಕ ಮಾಹಿತಿ ಕಲೆಹಾಕಿ ಅವರನ್ನು ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಮನೋವೈದ್ಯರಿಂದ ತಾಲೂಕ ಆಸ್ಪತ್ರೆಯಲ್ಲಿ ಪ್ರತಿ ಮಂಗಳವಾರ ಉಚಿತ ತಪಾಸಣೆ ಮತ್ತು ಚಿಕಿತ್ಸೆಯನ್ನು ನೀಡಲಾಗುತ್ತದೆ, "ಹಳ್ಳಿಗಳಲ್ಲಿ ಅನೇಕ ಜನರು ಮೂಢನಂಬಿಕೆಗೆ ಬಲಿಯಾಗಿದ್ದಾರೆ" ಇಂಥವರನ್ನು ತಮ್ಮ ಕ್ಷೇತ್ರಗಳಲ್ಲಿರುವ ಜನರಿಗೆ ವೈಜ್ಞಾನಿಕವಾದ ಚಿಕಿತ್ಸೆಯ ಬಗ್ಗೆ ಅರಿವು ಮೂಡಿಸುವದು. ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ ಒಳ್ಳೆಯ ಆರೋಗ್ಯಕರ ಸಮಾಜವನ್ನು ನಿರ್ಮಾಣ ಮಾಡಲು ನಮ್ಮ ಜೊತೆ ಕೈಜೋಡಿಸಬೇಕೆಂದು ತರಬೇತಿ ನೀಡಲಾಯಿತು.ಈ ಕಾರ್ಯಕ್ರಮದಲ್ಲಿ ವಲಯ ಮೇಲ್ವಿಚಾರಕರು ಅಂಗನವಾಡಿ ಕಾರ್ಯಕರ್ತೆಯರು ಒಟ್ಟು 35 ಜನರು ಭಾಗವಹಿಸಿದರು.

## “ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವು”



ದಿನಾಂಕ 30/01/2025 ರಂದು ಭಾಲ್ಕಿ ತಾಲೂಕಿನ ಭಾಗ್ಯನಗರ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆ ಮಕ್ಕಳಿಗೆ ನವಜೀವನ (LLLF) ಕಾರ್ಯಕ್ರಮದ ಕಾರ್ಯಕರ್ತರಾದ ಕುಮಾರ್ ರವರಿಂದ ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವು ಮೂಡಿಸಲಾಯಿತು.ಮಾನಸಿಕ ರೋಗ ಎಂದರೇನು?ಮಾನಸಿಕ ರೋಗಕ್ಕೆ ಕಾರಣ, ಮಾನಸಿಕ ಕಾಯಿಲೆ ಲಕ್ಷಣಗಳು ಮತ್ತು ಚಿಕಿತ್ಸೆ ಬಗ್ಗೆ ಅರಿವು ಮೂಡಿಸಲಾಯಿತು.ಜೊತೆಯಲ್ಲಿ ಕ್ಯಾನ್ಸರ್ ಕಾಯಿಲೆವು ಹೇಗೆ ಬರುತ್ತದೆ ಮತ್ತು ಅದನ್ನು ಪತ್ತೆ ಹಚ್ಚುವ ನಿಧಾನವನ್ನು ತಿಳಿಸಲಾಯಿತು. ಸರಕಾರದಿಂದ ಬರುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿ ಮಾನಸಿಕ ಕಾಯಿಲೆ ಒಂದು ಮೆದುಳಿನ ಕಾಯಿಲೆ ಆಗಿದೆ ಯಾರು ಮೂಡನಂಬಿಕೆಗೆ ಒಳಗಾಗದೆ ಕೂಡಲೇ ಚಿಕಿತ್ಸೆ ಪಡೆದುಕೊಳ್ಳಬೇಕೆಂದು ಹೇಳಲಾಯಿತು. ಹಾಗೂ ಪ್ರತಿ ತಿಂಗಳು ಎರಡನೆ ಮಂಗಳವಾರ ಭಾಲ್ಕಿ ಯಲ್ಲಿ DMHP comp ಇರುತ್ತದೆ ಎಂದು ಹೇಳಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 34 ಜನ ಶಾಲೆಯ ಮಕ್ಕಳು ಹಾಗೂ 4 ಜನ ಶಿಕ್ಷಕರು ಉಪಸ್ಥಿತರಿದ್ದರು.

## “ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ”



ದಿನಾಂಕ 28.01.2025 ರಂದು ಕಮಲ್ನಗರ್ ತಾಲೂಕಿನ ನಿಡೋದ ಗ್ರಾಮದಲ್ಲಿ, ಆರ್ಬಿಟ್ ಸಂಸ್ಥೆಯ ಮತ್ತು ಎಲ್.ಎಲ್.ಎಲ್.ಎಫ್ ಸಯುಕ್ತಾಸ್ರಯದಲ್ಲಿ, ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ ನೀಡಲಾಯಿತು, ಆರೋಗ್ಯ ಎಂದರೇನು ಮಾನಸಿಕವಾಗಿ, ದೈಹಿಕ, ಶಾರೀರಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಸದೃಢ ಇರುವನೇ ಆರೋಗ್ಯ ಎಂದು ಕರೆಯುತ್ತಾರೆ, ಮಾನಸಿಕ ರೋಗ ಬರಲು ಕಾರಣವೇನೆಂದರೆ ಒಂದು ವ್ಯಕ್ತಿಯ ಜೀವನದಲ್ಲಿ ನಡೆದ ಕಹಿ ಘಟನೆಯಿಂದ ಅದನ್ನೇ ಪುನಃ ಪುನಃ ವಿಚಾರ ಮಾಡಿ ಮಾಡಿ ಮಾನಸಿಕ ರೋಗಕ್ಕೆ ತುತ್ತಾಗುತ್ತಾನೆ, ಈ ರೋಗವು ಒಂದು ಮೆದುಳಿನ ರೋಗ ಮೆದುಳಿನಲ್ಲಿರುವ ರಾಸಾಯನಿಕ ಕ್ರಿಯೆಗಳಲ್ಲಿ ಬದಲಾವಣೆ ಉಂಟಾದಾಗ ವಿಚಿತ್ರವಾಗಿ ವರ್ತಿಸಲು ಪ್ರಾರಂಭಿಸುತ್ತಾರೆ, ಉದಾಹರಣೆಗೆ ತನ್ನಿಂತಾನೆ ನಗುವುದು,ವಿನಾಕಾರಣ ಅಳುವುದು, ಬೀದಿ ಸುತ್ತುವುದು, ಅನುಮಾನ ಪಡುವಂಥದ್ದು, ಕೋಪ, ವಿಚಿತ್ರ ನಡವಳಿಕೆ, ಇತ್ಯಾದಿ ಲಕ್ಷಣಗಳು ಕಂಡುಬರುತ್ತದೆ. ಈ ಲಕ್ಷಣಗಳು ಕಂಡು ಬಂದ ವ್ಯಕ್ತಿಗೆ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಸೂಕ್ತ ಚಿಕಿತ್ಸೆ ನೀಡುವುದು. ಪ್ರತಿ ತಿಂಗಳ ಎರಡನೇ ಶುಕ್ರವಾರದಂದು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮನೋವೈದ್ಯರ ಬರುತ್ತಾರೆ ಉಚಿತವಾಗಿ ಚಿಕಿತ್ಸೆ ನೀಡುತ್ತಾರೆ ಇತರ ಲಕ್ಷಣ ಕಂಡು ಬಂದ ವ್ಯಕ್ತಿಗಳು ನಿಮ್ಮ ಗ್ರಾಮದಲ್ಲಿ ಕಂಡು ಬಂದರೆ ನಮ್ಮ ಸಂಸ್ಥೆಯ ಸಹಾಯವಾಣಿ 9036664271 ಕರೆ ಮಾಡಿ ಮಾಹಿತಿ ನೀಡುವುದು ಎಂದು ಹೇಳಲಾಯಿತು.

## “ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವು”



ದಿನಾಂಕ 21/01/2025 ರಂದು ಭಾಲ್ಕಿ ತಾಲೂಕಿನ ದಾಡಗಿ ಗ್ರಾಮದಲ್ಲಿ ಅನ್ನಪೂರ್ಣ ಸ್ವಸಹಾಯ ಸಂಘದವರಿಗೆ ನವಜೀವನ (LLLF) ಕಾರ್ಯಕ್ರಮದ ಕಾರ್ಯಕರ್ತರಾದ ಕುಮಾರ್ ರವರಿಂದ ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವು ಮೂಡಿಸಲಾಯಿತು.ಮಾನಸಿಕ ರೋಗ ಎಂದರೇನು?ಮಾನಸಿಕ ರೋಗಕ್ಕೆ ಕಾರಣ.ಮಾನಸಿಕ ಕಾಯಿಲೆ ಲಕ್ಷಣಗಳು ಮತ್ತು ಚಿಕಿತ್ಸೆ ಬಗ್ಗೆ ಅರಿವು ಮೂಡಿಸಲಾಯಿತು.ಜೊತೆಯಲ್ಲಿ ಕ್ಯಾನ್ಸರ್ ಕಾಯಿಲೆವು ಹೇಗೆ ಬರುತ್ತದೆ ಮತ್ತು ಅದನ್ನು ಪತ್ತೆ ಹಚ್ಚುವ ವಿಧಾನವನ್ನು ತಿಳಿಸಲಾಯಿತು. ಸರಕಾರದಿಂದ ಬರುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿ ಮಾನಸಿಕ ಕಾಯಿಲೆ ಒಂದು ಮೆದುಳಿನ ಕಾಯಿಲೆ ಆಗಿದೆ ಯಾರು ಮೂಡನಂಬಿಕೆಗೆ ಒಳಗಾಗದೆ ಕೂಡಲೇ ಚಿಕಿತ್ಸೆ ಪಡೆದುಕೊಳ್ಳಬೇಕೆಂದು ಹೇಳಲಾಯಿತು. ಪ್ರತಿ ತಿಂಗಳು ಎರಡನೆ ಮಂಗಳವಾರ ಭಾಲ್ಕಿಯಲ್ಲಿ DMHP comp ಇರುತ್ತದೆ ಎಂದು ಹೇಳಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 08 ಜನ ಮಹಿಳೆಯರು ಉಪಸ್ಥಿತರಿದ್ದರು.

## ಮಹಿಳಾ ಸಬಲೀಕರಣಕಾರ್ಯಕ್ರಮ"

### "ಜನಶಕ್ತಿ ತಾಲೂಕ ಒಕ್ಕೂಟ ಹಾಗೂ ಬೆಳದಿಂಗಳ ಜಿಲ್ಲಾ ಒಕ್ಕೂಟದ ಕಾರ್ಯಕ್ರಮ"



ದಿನಾಂಕ 07.01.2025ರಂದು ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮಹಿಳಾ ಸಬಲೀಕರಣ ಯೋಜನೆಯಡಿಯಲ್ಲಿ ಬರುವ ಜನಶಕ್ತಿ ತಾಲೂಕ ಒಕ್ಕೂಟ ಹಾಗೂ ಬೆಳದಿಂಗಳ ಜಿಲ್ಲಾ ಒಕ್ಕೂಟದ ಪದಾಧಿಕಾರಿಗಳಿಗೆ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ರವರು ಸಂಸ್ಥೆಯ 30 ವರ್ಷದ ಜುಬ್ಲಿ ಕಾರ್ಯಕ್ರಮದ ಕುರಿತು ವಿಷಯವನ್ನು ತಿಳಿಸುತ್ತಾ, ಸುಮಾರು 30 ವರ್ಷಗಳಿಂದ ಮಹಿಳೆಯರ ಸಬಲೀಕರಣಕ್ಕಾಗಿ ಸಂಸ್ಥೆಯು ಸತತವಾಗಿ ಸೇವೆ ನೀಡುತ್ತಿದ್ದು ತಾವೆಲ್ಲರೂ  ನಾಯಕರಾಗಿ ಬೆಳೆದುಕೊಂಡಿದ್ದೀರಿ ಆದುದರಿಂದ ಈ ಕಾರ್ಯಕ್ರಮವನ್ನು ತಮ್ಮ ನೇತೃತ್ವದಲ್ಲಿ ನಡೆಯಬೇಕು. ಎಂಬುದೇ ಸಂಸ್ಥೆಯ ಉದ್ದೇಶವಾಗಿದೆ.ಆದ್ದರಿಂದ ನಿಮ್ಮೆಲ್ಲರ ಸಹಕಾರ ಸಹಭಾಗಿತ್ವ ಮುಖ್ಯವಾಗಿದೆ.ತಾವೆಲ್ಲರೂ ಇದರ ಜವಾಬ್ದಾರಿಯನ್ನು ವಹಿಸಿಕೊಂಡು ಅಚ್ಚುಕಟ್ಟಾಗಿ ಕಾರ್ಯ ನಿರ್ವಹಿಸಬೇಕು.ತಮ್ಮ ಮನೆಯಲ್ಲಿ ಕಾರ್ಯಕ್ರಮಗಳಿದ್ದಾಗ ಪ್ರತಿಯೊಬ್ಬರು ಹೇಗೆ ಜವಾಬ್ದಾರಿಯನ್ನು ವಹಿಸಿಕೊಂಡು ಸಂಭ್ರಮಿಸುತ್ತೀರೋ ಹಾಗೆಯೇ ಇದು ಕೂಡ ನಿಮ್ಮ ಸಂಸ್ಥೆ ಆಗಿರುವುದರಿಂದ ನನ್ನದು ಎನ್ನುವ ಭಾವನೆಯಿಂದ ಉತ್ತಮವಾದ ರೀತಿಯಲ್ಲಿ ನಿರ್ವಹಿಸಬೇಕೆಂದು ತಿಳಿಸಿದರು.

### "ಗ್ರಾಮದ ಸಮಸ್ಯೆಗಳ ಕುರಿತು ಹಾಗೂ ಅಧಿಕಾರಿಗಳೊಂದಿಗೆ ಜಾಲ ಬಂದ"



ಸಿತಾಳಗೇರಾ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ 4 ಸಂಘಗಳನ್ನು ರಚನೆ ಮಾಡಲಾಯಿತು. ಹಾಗೆ ನಾಲ್ಕು ಸಂಘಗಳನ್ನು ಒಟ್ಟು ಸೇರಿಸಿ ಒಂದು ಉದಯ ಮಹಾಸಭಾ ರಚನೆ ಮಾಡಲಾಯಿತು. ಈ ಮಹಾಸಂಘದಲ್ಲಿ ಹಲವಾರು ಮಾಹಿತಿ ತರಬೇತಿಗಳನ್ನು ನೀಡಿ ಗ್ರಾಮದ ಸಮಸ್ಯೆಗಳ ಕುರಿತು ಹಾಗೂ ಅಧಿಕಾರಿಗಳೊಂದಿಗೆ ಜಾಲ ಬಂದ ಬೆಳಸಿ ಸಮಸ್ಯೆಗಳ ಬಗ್ಗೆ ಅರ್ಜಿ ಕೊಡುವ ಕುರಿತು ಮಾಹಿತಿಗಳನ್ನು ನೀಡಿದ ಪರಿಣಾಮವಾಗಿ ಉದಯ ಮಹಾಸಂಘದ ಸದಸ್ಯರು ಚರಂಡಿಯ ಸಮಸ್ಯೆಯನ್ನು ಗುರುತಿಸಿ ಗ್ರಾಮ ಪಂಚಾಯತ್ ಪಿ.ಡಿ.ಒ ಅವರಿಗೆ ಚರಂಡಿ ವ್ಯವಸ್ಥೆಯನ್ನು ಮಾಡಿಸಿಕೊಡುವ ಕುರಿತು ಅರ್ಜಿಯನ್ನು ಸಲ್ಲಿಸಿ ಪದೇ ಪದೇ ಪಂಚಾಯಿತಿಗೆ ಭೇಟಿ ನೀಡಿದ ಪರಿಣಾಮವಾಗಿ ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ಓಣಿಗೆ ಭೇಟಿ ನೀಡಿ ಸಮಸ್ಯೆ ಕುರಿತು ವೀಕ್ಷಣೆ ಮಾಡಿದರು. ವೀಕ್ಷಣೆ ಮಾಡಿದ ಸ್ವಲ್ಪ ದಿನಗಳಲ್ಲಿ ಚರಂಡಿಯನ್ನು ನಿರ್ಮಿಸಿ ಕೊಟ್ಟಿರುತ್ತಾರೆ.

### "ಸರ್ಕಾರದಿಂದ ಸಿಗುವಂತಹ ಸೌಲಭ್ಯಗಳ ಕುರಿತು ತರಬೇತಿ"



ಜನವರಿ 23 2025 ರಂದು ಚಿಟಗುಪ್ಪ ತಾಲೂಕಿನ ಮುದ್ನಾಳ್ ಗ್ರಾಮದಲ್ಲಿ ಶ್ರೀಮತಿ ರೀಟ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರು ಸಂಘದ ಮಹಿಳೆಯರಿಗೆ ಸರ್ಕಾರದಿಂದ ಸಿಗುವಂತಹ ಸೌಲಭ್ಯಗಳ ಕುರಿತು ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿರುವಂತಹ ಫಾದರ್ ಸುನಿಲ್ ಮಾಲ್ ಕರೆ ನಿರ್ದೇಶಕರು ಮೇರಿ ಪವಾಡ ಮಾತೆ ಮಂದಿರ ಇಟಗ ಹಾಗೂ ಶ್ರೀಮತಿ ಅಮಿತಾ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರು ಮಾತನಾಡುತ್ತ, ಸರ್ಕಾರದ ಸೌಲಭ್ಯಗಳನ್ನು ನಾವು ಹೇಗೆ ಪಡೆದುಕೊಳ್ಳಬೇಕು ಸರ್ಕಾರದೊಂದಿಗೆ ಜಾಲ ಬಂದ ಹೇಗೆ ಬಳಸಿಕೊಳ್ಳಬೇಕು, ಎಂಬುದರ ಬಗ್ಗೆ ಸಹ ವಿಸ್ತಾರವಾಗಿ ತಿಳಿಸಿದರು. ಹಾಗೆ ಹೊಸ ಸಂಘ ಸಹ ರಚನೆ ಮಾಡಿ ಸಂಘಟಿತರಾಗಿ ನಾಯಕತ್ವದ ಜವಾಬ್ದಾರಿಗಳನ್ನು ತೆಗೆದುಕೊಳ್ಳಬೇಕೆಂದು ಮಹಿಳೆಯರಿಗೆ ಮನವರಿಕೆ ಮಾಡಿಸಿದರು ಈ ತರಬೇತಿಯಲ್ಲಿ 20 ಮಹಿಳೆಯರು ಭಾಗವಹಿಸಿ ವಿವಿಧ ಸರಕಾರಿ ಸೌಲಭ್ಯಗಳ ಬಗ್ಗೆ ತಿಳಿದುಕೊಂಡರು.

### "ಸ್ಥಳೀಯ ಸಂಪನ್ಮೂಲ ಕ್ರೂಡೀಕರಣದ ತರಬೇತಿ"



ದಿನಾಂಕ 24 2025ರಂದು ಕಲ್ವಾಡಿ ಗ್ರಾಮದಲ್ಲಿ ಮಹಿಳಾ ಸಬಲೀಕರಣದ ಕಾರ್ಯಕರ್ತೆಯಾದ ಶ್ರೀಮತಿ ಸುಜಾತ ರವರು ಸ್ಥಳೀಯ ಸಂಪನ್ಮೂಲ ಕ್ರೂಡೀಕರಣದ ತರಬೇತಿಯನ್ನು ಕೊಡಲಾಯಿತು.ಸ್ಥಳೀಯ ಸಂಪನ್ಮೂಲ ಕ್ರೂಡೀಕರಣ ಎಂದರೆ ನಮ್ಮ ಸುತ್ತಮುತ್ತಲಿರುವ ವಾತಾವರಣವೇ ಸಂಪನ್ಮೂಲವಾಗಿದೆ.ಸಂಪನ್ಮೂಲಗಳ ವಿಧಗಳು ಎರಡು 1) ನೈಸರ್ಗಿಕ ಸಂಪನ್ಮೂಲ 2) ಮಾನವನ ಸಂಪನ್ಮೂಲ.ನೈಸರ್ಗಿಕ ಸಂಪನ್ಮೂಲಗಳೆಂದರೆ ಬಿಸಿಲು, ಮಳೆ, ಸೂರ್ಯ, ಚಂದ್ರ, ಹಗಲು, ರಾತ್ರಿ, ಮಳೆಗಾಲ ಮತ್ತು ಚಳಿಗಾಲ ಮತ್ತು ಬೇಸಿಗೆ ಕಾಲ ಇವುಗಳನ್ನು ನೈಸರ್ಗಿಕ ಸಂಪನ್ಮೂಲಗಳು ಎಂದು ಕರೆಯುತ್ತಾರೆ. ಮಾನವನ ಸಂಪನ್ಮೂಲಗಳೆಂದರೆ ಮಾನವನಿಗೆ ಅಗತ್ಯವಾದ ವಸ್ತುಗಳು ಬಟ್ಟೆ, ನೀರು, ಆಹಾರ ಮತ್ತು ಒಂದು ಚಿಕ್ಕ ಮನೆ ಟೂತ್ ಪೇಸ್ಟ್, ಬ್ರಷ್, ಸಾಬೂನ್, ವಾಷಿಂಗ್ ಮಷೀನ್, ಫ್ರಿಜ್ಜ, ಸಿಲಿಂಡರ್ ಗ್ಯಾಸ್ ಇತ್ಯಾದಿಗಳು ಮಾನವನ ಸಂಪನ್ಮೂಲಗಳಾಗಿವೆ. ನೈಸರ್ಗಿಕ ಸಂಪನ್ಮೂಲಗಳನ್ನು ಮತ್ತು ಮಾನವನ ಸಂಪನ್ಮೂಲಗಳನ್ನು ನಾವು ಪಡೆದುಕೊಳ್ಳುತ್ತೇವೆ. ಇವೆಲ್ಲವೂ ದಿನನಿತ್ಯ ನಮಗೆ ಅಗತ್ಯವಾದ ವಸ್ತುಗಳಾಗಿವೆ ಎಂದು ಹೇಳಿ ತಿಳಿಸುತ್ತಾ  ಶ್ರೀಮತಿ ಸರೋಜಿನಿ ಅವರ ಧನ್ಯವಾದಗಳೊಂದಿಗೆ  ಈ ತರಬೇತಿಯನ್ನು ಮುಕ್ತಾಯ ಮಾಡಲಾಗಿದೆ.

### "ಮಹಿಳಾ ಹಕ್ಕುಗಳ ಕುರಿತು ತರಬೇತಿ"



ದಿವ್ಯ ಜ್ಯೋತಿ ಮಹಾಸಂಘದ ಸದಸ್ಯರಿಗೆ ಸಿಸ್ಟರ್ ಕ್ರಿಸ್ಟಿನಾ ಮಹಿಳಾ ಸಬಲೀಕರಣ ಯೋಜನೆಯ ಸ್ಥಳೀಯ ಸಂಯೋಜಕರು ಮಹಿಳಾ ಹಕ್ಕುಗಳ ಕುರಿತು ತರಬೇತಿಯನ್ನು ಹಮ್ಮಿಕೊಂಡಿದ್ದರು. ಮಹಿಳೆಯರಿಗೆ ಇರುವ ವಿಶೇಷ ಹಕ್ಕುಗಳ ಕುರಿತು ತರಬೇತಿಯನ್ನು ನೀಡುತ್ತಾ, ಸಮಾನತೆಯ ಹಕ್ಕು ಸ್ವಾತಂತ್ರ್ಯದ ಹಕ್ಕು, ಭಾಗವಹಿಸುವ ಹಕ್ಕು, ಶೋಷಣೆಯ ವಿರುದ್ಧದ ಹಕ್ಕು ಮತ್ತು ಸಂವಿಧಾನಾತ್ಮಕ ಪರಿಹಾರದ ಹಕ್ಕು ಇವುಗಳ ಕುರಿತು ಸವಿಸ್ತಾರವಾದ ಮಾಹಿತಿಯನ್ನು ನೀಡಲಾಯಿತು, ನಿಮ್ಮ ಹಕ್ಕುಗಳು ಉಲ್ಲಂಘನೆಯಲ್ಲಿ ಧ್ವನಿಯೆತ್ತಿ ನಿಲ್ಲುವಂತಹ ಧೀರ ಮಹಿಳೆಯರು ನೀವು ಆಗಬೇಕೆಂದು ತಿಳಿಸಲಾಯಿತು. ತರಬೇತಿಯಲ್ಲಿ 15 ಮಹಿಳೆಯರು ಭಾಗವಹಿಸಿ ಅವರಿಗಿರುವ ವಿಶೇಷ ಹಕ್ಕುಗಳ ಬಗ್ಗೆ ತಿಳಿದುಕೊಂಡರು.

## “ಲಿಂಗ ಸಮಾನತೆ ಕುರಿತುತರಬೇತಿ”






ದಿನಾಂಕ 9 2025ರಂದು ಚಿಟಗುಪ್ತ ತಾಲೂಕಿನ ವಡ್ಡನ್ಕೇರ ಗ್ರಾಮದಲ್ಲಿ ಲಿಂಗ ಪ್ರೇರಣ ಸೂಕ್ಷ್ಮಥ ತಂಡದ ಸದಸ್ಯರಾದ ಶ್ರೀಮತಿ ಭಾಗ್ಯಶ್ರೀ ಹಾಗೂ ಶ್ರೀ ಅರುಣ್ ಕುಮಾರ್ ರವರು ಕಿರಣ ಮಹಾಸಂಗದ ಸದಸ್ಯರಿಗೆ ಹಾಗೂ ಸ್ವ-ಸಹಾಯ ಸಂಘ ಸದಸ್ಯರಿಗೆ ಲಿಂಗ ಸಮಾನತೆ ಕುರಿತು ಮಾಹಿತಿ ತಿಳಿಸುತ್ತಾ ಲಿಂಗ ಮತ್ತು ಲಿಂಗತ್ವಕಿರುವ ವ್ಯತ್ಯಾಸ ಕುರಿತು ಮಾತನಾಡುತ್ತಾ ಲಿಂಗ ಎಂದರೆ ಗಂಡು-ಹೆಣ್ಣು ಇದು ಪ್ರಕೃತಿದತ್ತವಾಗಿ ಬಂದಿರುವಂಥದ್ದು ಇದು ಯಾರಿಂದಲೂ ಬದಲಾಯಿಸಲು ಆಗುವುದಿಲ್ಲ. ಲಿಂಗತ್ವ ಇದು ಸಮಾಜ ನಮ್ಮ ಮೇಲೆ ಹೇರಳಪಟ್ಟಂತಹ ಪಾತ್ರ ಮತ್ತು ಜವಾಬ್ದಾರಿಗಳು ಇದನ್ನು ಯಾವ ಸಮಯದಲ್ಲೂ ಬದಲಾಯಿಸಬಹುದು ಇದು ಮೊದಲು ನಮ್ಮ ಕುಟುಂಬದಿಂದಲೇ ಪ್ರಾರಂಭವಾಗಬೇಕು ಅಂದಾಗ ಮಾತ್ರ ಲಿಂಗ ಸಮಾನತ ತರಲು ಸಾಧ್ಯವಾಗುತ್ತದೆ ಎಂದು ಸವಿಸ್ತಾರವಾಗಿ ಮಾಹಿತಿ ನೀಡಿದರು.

## “ಪ್ರೇಮಾಂಜಲಿ ಮಹಾಸಂಘದ ಪದಾಧಿಕಾರಿಗಳಿಗೆ ಹಕ್ಕುತ್ತಾಯ ಜಾಲಬಂದ ತರಬೇತಿ”



ದಿನಾಂಕ 6.1.2025 ರಂದು ಭಾಲ್ಕಿ ತಾಲೂಕಿನ ಸಿದ್ದೇಶ್ವರ ಗ್ರಾಮದ ಪ್ರೇಮಾಂಜಲಿ ಮಹಾಸಂಘದ ಪದಾಧಿಕಾರಿಗಳಿಗೆ ಹಕ್ಕುತ್ತಾಯ ಜಾಲಬಂದ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು.ಆರ್ಬಿಟ್ ಸಂಸ್ಥೆಯ ಮಹಿಳಾ ಸಬಲೀಕರಣದ ಕಾರ್ಯಕರ್ತರ ಆದ ಶ್ರೀಮತಿ ಪ್ರಭಾವತಿಯವರು ಗುಂಪಿನ ಸದಸ್ಯರಿಗೆ ಜಾಲಬಂದ ಎಂದರೆ ನಮ್ಮ ಹಕ್ಕುಗಳನ್ನು ಪಡೆಯುವಾಗ ಸಂಬಂಧಪಟ್ಟ ಇಲಾಖೆಗಳು ನೀಡದೆ ಇದ್ದಾಗ ಅಥವಾ ಉಲ್ಲಂಘನೆ ಆದಾಗ ಅದನ್ನು ನೇರವಾಗಿ ಸರ್ಕಾರಕ್ಕೆ ತಿಳಿಸುವುದು. ಹಕ್ಕುತ್ತಾಯ ಎಂದು ಕರೆಯಲಾಗುತ್ತದೆ. ಉದಾಹರಣೆಗೆ ಅರ್ಜಿ ಹಾಕುವುದು, ಅರ್ಜಿ ಹಾಕುವ ಮೂಲಕ ಶುಲ್ಕ, ಕುಡಿಯುವ ನೀರಿಗಾಗಿ ಸ್ಥಳೀಯ ಪಂಚಾಯತಿಗೆ ಅರ್ಜಿ ಸಲ್ಲಿಸುವುದು.ನಿಸ್ಕೃತ ಪಡೆಯದೆ ಮನವಿ ಕೊಡುವುದು.ಕೊಟ್ಟ ಅರ್ಜಿಗೆ ವಂದನೆ ಬಾರದೆ ಇದ್ದಾರೆ ಜ್ಞಾಪಿಸುವುದು. ಧರಣಿ ಸತ್ಯಾಗ್ರಹ ಅಥವಾ ಉಪವಾಸ ಸತ್ಯಾಗ್ರಹ ಸಂಬಂಧ ಪಟ್ಟ ಇಲಾಖೆಗೆ ಹೋಗಿ ಸತ್ಯಾಗ್ರಹವನ್ನು ಮಾಡುವುದು. ಮಾನವನ ಸರಪಳಿ ಕೈ ಕೈ ಹಿಡಿದುಕೊಂಡು ಮಾನವನ ಸರಪಳಿಯನ್ನು ಮಾಡಿ ಹಕ್ಕುಗಳಿಗಾಗಿ ಹೋರಾಟ ಮಾಡುವುದು ಎಂದು ಹೇಳಲಾಯಿತು.

## 30ನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ವಿಕಲಚೆತನರಿಗೆ “ಗಾಲಿಕುರ್ಚಿ ವಿತರಣೆ ಕಾರ್ಯಕ್ರಮ”



ದಿನಾಂಕ 31/01/2025 ರಂದು ಆರ್ಬಿಟ್ ಸಮಾಜ ಸೇವಾ ಸಂಸ್ಥೆ, ಹುಮನಾಬಾದ 30ನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ “ಗಾಲಿಕುರ್ಚಿ ವಿತರಣೆ ಕಾರ್ಯಕ್ರಮ” ವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವನ್ನು ಶ್ರೀಮತಿ ಕವಿತಾ ಮತ್ತು ಮಹಾದೇವಿ ರವರು ಪ್ರಾರ್ಥನೆ ಗೀತೆಯ ಮೂಲಕ ಪ್ರಾರಂಭಿಸಿದರು. ಈ ಕಾರ್ಯಕ್ರಮಕ್ಕೆ ಆಗಮಿಸಿದ ಅತಿಥಿಗಳಿಗೆ ಸ್ವಾಗತ ಮತ್ತು ಸನ್ಮನ ಕಾರ್ಯಕ್ರಮವನ್ನು ಹಮ್ಮಿಕೋಳಲಾಗಿತ್ತು. ಪ್ರಾಸ್ತವಿಕ ನುಡಿ ಮಾತನಾಡಿದ ಶ್ರೀ. ರವಿಕುಮಾರ ರವರು “ಕಳೆದ 30 ವರ್ಷದಲ್ಲಿ ಬಡ ಜನತೆಯನ್ನು ಕಂಡು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಪ್ರಬಲಗೊಳಿಸುವ ಉದ್ದೇಶದಿಂದ ಆರ್ಬಿಟ್ ಸಂಸ್ಥೆ ಬೀದರ ಜಿಲ್ಲೆಯ ಸಮಗ್ರ ಅಭಿವೃಧಿಗಾಗಿ ಸೇವೆ ಸಲ್ಲಿಸುತ್ತಿದೆ ಎಂದು ಸಂಸ್ಥೆಯು ಮಾಡುತ್ತಿರುವ ಕೆಲಸ ಕಾರ್ಯಗಳ ಬಗ್ಗೆ ಸ್ಪಷ್ಟವಾಗಿ ತಮ್ಮ ಪ್ರಾಸ್ತವಿಕ ನುಡಿಯಲ್ಲಿ ಮಾತನಾಡಿದರು. ಶ್ರೀ ಶಿವಕುಮಾರ ಪಾಟಿಲ್ ಎಂ.ಆರ್.ಡಬ್ಲೂ, ಹುಮನಾಬಾದ ರವರು ಮಾತನಾಡುತ್ತಾ ಆರ್ಬಿಟ್ ಸಂಸ್ಥೆಯ ಕೆಲಸ ಕಾರ್ಯಗಳಲ್ಲಿ ಹೆಮ್ಮೆಯಿಂದ ಸೇವೆ ಮಾಡಿ, ಸರಕಾರದ ಸೌಲಭ್ಯಗಳಲ್ಲಿ ತೊಡಗಿಸಿಕೊಂಡು ಸೇವೆ ಸಲ್ಲಿಸುತ್ತಾ ವಿಕಲಚೇತನರಿಗಾಗಿ ಸಾಮಾಗ್ರಿಗಳು, ಸಾಧನ ಸಲಕರಣೆಗಳು ನೀಡಿ ಯಾವುದೇ ಬಡಜನರಿಗೆ ತೊಂದರೆ ಆಗದಂತೆ ಗಾಲಿ ಕುರ್ಚಿ ವಿತರಣೆ ಕಾರ್ಯಕ್ರಮ, ವಿಶೇಷ ವಿಕಲ ಚೆತನರಿಗೆ ಸಹಾಯ ಮಾಡುವಲ್ಲಿ ಆರ್ಬಿಟ್ ಸಂಸ್ಥೆ ಮುಂದಾಗಿದೆ ಎಂದು ತನ್ನ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದರು. ಶ್ರೀ ರೋಹನ್ ಫ್ರ್ಯಾಂಕೋ ಪ್ರಾದೇಶಿಕ ವ್ಯವಸ್ಥಾಪಕರು ಅಸ್ಟರ್ ಡಿ.ಎಮ್ ಫೌಂಡೇಶನ್ ಬೆಂಗಳೂರು ಮಾತನಾಡಿ ಬೆಂಗಳೂರನಲ್ಲಿ ಅನೇಕ ಸಂಸ್ಥೆಗಳಿವೆ, ಹಳ್ಳಿ ಪ್ರದೇಶಗಳಲ್ಲಿ ಗುರುತಿಸಿ, ಫಲಾನುಭವಿಗಳಿಗೆ ಸರಕಾರದ ಯೋಜನೆಗಳು ಜನರಿಗೆ ಸೇರಿದರೆ ಅವುಗಳು ಯಶ್ವಸಿಆಗುತ್ತವೆ. ಸರಕಾರದ ಯೋಜನೆಗಳು ಸರಕಾರದಿಂದ ಒಂದು ಸಣ್ಣ ಕೊಡುಗೆ ಆಗಿರುತ್ತದೆ. ಎಂದು ತಮ್ಮ ಅನಿಸಿಕೆಯನ್ನು ನೀಡಿದರು. ವಂ. ಫಾ॥. ವಿನ್ಸೆಂಟ್ ಫಿರೇರಾ ಮದರ ತೇರೆಸಾ ಆಸ್ಪತ್ರೆ ಗುಲ್ಬರ್ಗಾ ರವರು ಮಾತನಾಡಿ ಸೇವೆಯು ಭಾಷಣ ಮಾಡಿದರೆ ಸಾಲದು ಅಂಚಿನಲ್ಲಿರುವ ಜನರಿಗೆ ಸೇವೆ ತಲುಪಲು ಪ್ರಯತ್ನಿಸಬೇಕು., ಕೆಲವು ವರ್ಷಗಳಿಂದ ವಿಕಲಚೇತನರಿಗೆ ಬೇರೆ ಬೇರೆ ಪದಗಳನ್ನು ಉಪಯೋಗಿಸುತ್ತಿದ್ದರು. ಇಂದು ವಿಶೇಷ ವಿಕಲಚೇತನರು ಎಂದು ಕರೆಯುತ್ತಾ ಅವರಿಗೆ ಗಾಲಿ ಕುರ್ಚಿ ಉಪಯೋಗಿಸಲು, ಅಸ್ಟರ್ ಡಿ.ಎಮ್ ಫೌಂಡೇಶನ್ ಬೆಂಗಳೂರು ಅವರು ಸಹಾಯ ಮಾಡಿದ್ದಾರೆ ಎಂದು ಅವರನ್ನು ಅಭಿನಂದಿಸುತ್ತಾ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ಪಾರ್ವತಮ್ಮ ಶೆರಿಕರ್ ಅಧ್ಯಕ್ಷರು ಪುರಸಭೆ ಹುಮನಾಬಾದ, ಎಮ್.ಡಿ ಮುಕರಂಝಾ ಉಪಾಧ್ಯಕರು ಪುರಸಭೆ ಹುಮನಾಬಾದ, ವಂ.ಫಾ॥.ವಿಕ್ಟರ್ ವಾಸ್ ನಿರ್ದೇಶಕರು ಆರ್ಬಿಟ್ ಸಂಸ್ಥೆ ಹುಮನಾಬಾದ ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರು ಭಾಗವಹಿಸಿದರು. 37 ಫಲಾನುಭವಿಗಳಿಗೆ ಗಾಲಿ ಕುರ್ಚಿ ವಿತರಿಸಲಾಯಿತು. ಶ್ರಿಮತಿ ಮಮತಾ ನಿರೂಪಸಿದರು, ವಿಜಯಕುಮಾರ ವಂದಿಸಿದರು.





# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## “ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕುರಿತು ಜಾಗೃತಿ ಕಾರ್ಯಕ್ರಮ”



ಕಲಬುರಗಿ ನಗರ ಪ್ರದೇಶದಲ್ಲಿ ಬರುವಂತಹ ಜಿ.ಡಿ.ಎ ಸ್ಲಂ ಬೋರ್ಡ್ ಅಂಗನವಾಡಿ ಕೇಂದ್ರ 1 ರಲ್ಲಿ ಜನವರಿ 8 ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಕು.ಅನಿತಾಅವರು ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ನ್ಯೂನ್ಯತೆಗೆ ಇರುವಂತಹ ಕಾರಣಗಳ ಬಗ್ಗೆ ಹಾಗೂ ಅವರಿಗೆ ಸೇವಾಸಂಗಮ ಸಂಸ್ಥೆ ಹಾಗೂ ಸರ್ಕಾರದಿಂದ ಸಿಗುವಂತಹ ಸೌಲಭ್ಯಗಳನ್ನು ದೊರಕಿಸುವಲ್ಲಿ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ತಿಳಿಸಲಾಯಿತು.ಈ ಕಾರ್ಯಕ್ರಮದಲ್ಲಿ 11 ಜನ ಭಾಗವಹಿಸಿದರು.ಅಂಗನವಾಡಿ ಕಾರ್ಯಕರ್ತೆಯಾದ ಶ್ರೀಮತಿ ಫರ್ವಿನ ಉಪಸ್ಥಿತರಿದರು.ಈ ಕಾರ್ಯಕ್ರಮದಿಂದ ಒಂದು ಮಗುವನ್ನು ಪತ್ತೆ ಹಚ್ಚಲಾಯಿತು.

## “ಬಾಲ್ಯ ವಿವಾಹ ಕುರಿತು ಜಾಗೃತಿ ಕಾರ್ಯಕ್ರಮ”



ಕಲಬುರಗಿ ನಗರ ಪ್ರದೇಶದಲ್ಲಿ ಬರುವಂತಹ ಮಂಗರವಾಡಿ ಅಂಗನವಾಡಿ ಕೇಂದ್ರ 1 ರಲ್ಲಿ ಜನವರಿ 9 ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಬಾಲ್ಯ ವಿವಾಹ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳಲಾಯಿತು. ಕು.ಅನಿತಾಅವರು ಬಾಲ್ಯ ವಿವಾಹ ತಡೆಗಟ್ಟಲು ಕಾಯ್ದೆ 1978 ರಲ್ಲಿ ಕಾನೂನು ಪ್ರಕಾರ ನಿಷೇದಿಸಲಾಗಿದೆ.ಈ ಕಾಯ್ದೆ ಪ್ರಕಾರ ಬಾಲ್ಯ ವಿವಾಹ ನಿಲ್ಲಿಸುವುದು ಮಾತ್ರವಲ್ಲ ಅದನ್ನು ಸಂಪೂರ್ಣ ರದ್ದುಗೋಳಿಸುವುದಾಗಿತ್ತು.ಕಾನೂನಿನ ಪ್ರಕಾರ ಪುರುಷರಿಗೆ ವಯಸ್ಸಿನ ಮಿತಿಯನ್ನು ಕನಿಷ್ಠ 21 ಹಾಗೂ ಮಹಿಳೆಯರಿಗೆ 18 ವರ್ಷ ನಿಗದಿ ಪಡಿಸಲಾಗಿದೆ.ಬಾಲ್ಯ ವಿವಾಹದಿಂದಾಗಿ ಹೆಣ್ಣು ಮಕ್ಕಳು ಅವಿದ್ಯ ವಂತರಾಗುತ್ತಾರೆ, ಅವರ ಶಿಕ್ಷಣ ಮಧ್ಯದಲ್ಲಿ ಬಿಡಬೇಕಾಗುತ್ತದೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ಇಲ್ಲದೆ ಬಾಲ್ಯ ವಿವಾಹ ಮಾಡುತ್ತಾರೆ. ಬಾಲ್ಯ ವಿವಾಹದಿಂದಾಗಿ ಹೆಣ್ಣು ಮಕ್ಕಳು ಅವರು ಪಡೆಯಬೇಕಾದ ಹಕ್ಕುಗಳು ಅದರಿಂದ ಅವರು ವಂಚಿತರಾಗುತ್ತಾರೆ ರಂದು ತಿಳಿಸಿದರು.ಈ ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಯಾದ ಶ್ರೀಮತಿ ಪ್ರಭಾವತಿ ಉಪಸ್ಥಿತರಿದರು.

## “ವಿವಾಹ ನಿಷೇಧ ಕುರಿತು ಜಾಗೃತಿ ಕಾರ್ಯಕ್ರಮ”



ಜನವರಿ 4 2025 ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ್ ಕಲಬುರಗಿ ಇವರ ಸಂಯುಕ್ತ ಆಶ್ರಯದಲ್ಲಿ ಶ್ರೀನಿವಾಸ್ ಸರಡಗಿ ಪಿ.ಎಸ್.ಸಿ ವಲಯದಲ್ಲಿ ಬರುವ ಆಶಾ ಕಾರ್ಯಕರ್ತೆಯರಿಗೆ ಯೋಜನೆಯ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಲಾಯಿತ್ತು. ಬೆಳವಣಿಗೆಯಲ್ಲಿ ಕುಂಠಿತ ಇರುವ ಮಕ್ಕಳಲ್ಲಿ ಯಾವ ತರಹದ ನ್ಯೂನತೆಗಳು ಕಂಡುಬರುತ್ತವೆ ಅಂದರೆ, ಮೂರು ತಿಂಗಳಲ್ಲಿ ಮಗುವಿನ ಕತ್ತು ನಿಲ್ಲದಿದ್ದಾಗ, 9 ತಿಂಗಳಲ್ಲಿ ಮಗುವು ಸರಿಯಾಗಿ ಕುಳ್ಳಿತ್ತುಕೋಳದೆ ಇರುವಾಗ 2 ವರ್ಷದಿಂದ 3 ವರ್ಷದ ಒಳಗೆ ಮಗುವು ಯಾವುದೇ ಪದಗಳನ್ನು ಮಾತಾನಾಡದೆ ಇರುವಾಗ ಮತ್ತು ಮಗುವು ಯಾವುದೆ ಅಕ್ಷರಗಳನ್ನು ಗುರುತಿಸದೇ ಇರುವಾಗ, ಈ ಮೇಲಿನ ಎಲ್ಲಾ ಅಂಶಗಳು ಮಕ್ಕಳಲ್ಲಿ ಕಂಡು ಬಂದಲ್ಲಿ ಮಗುವಿನ ಬೆಳವಣಿಗೆಯಲ್ಲಿ ನ್ಯೂನತೆಗಳು ಇವೆ, ಎಂದು ತಿಳಿದುಕೋಳ್ಳಬೇಕು. ಇಂತಹ ಮಕ್ಕಳು ನಿಮ್ಮ ಪಿ.ಎಸ್.ಸಿ ವಲಯದಲ್ಲಿ ಕಂಡುಬಂದರೆ ನಮ್ಮ ಸಂಸ್ಥೆಗೆ ತಿಳಿಸಿ ಎಂದು ಕಾರ್ಯಕರ್ತೆಯಾದ ಶ್ರೀಮತಿ ದಾಕ್ಷಯಣಿಯವರು ಮಾಹಿತಿ ತಿಳಿಸಿದ್ದರು.ಈ ಒಂದು ಕಾರ್ಯಕ್ರಮದಲ್ಲಿ ಒಟ್ಟು.20 ಆಶಾ ಕಾರ್ಯತೆಯರು ಭಾಗವಹಿಸಿದ್ದರು.

## “ಬೆಳವಣಿಗೆಯಲ್ಲಿ ಕುಂಠಿತ ಇರುವ ಮಕ್ಕಳ ಬಗ್ಗೆ ತರಬೇತಿ”



ಜನೆವರಿ 9 ರಂದು ಕಲಬುರಗಿ ನಗರ ಪ್ರದೇಶದಲ್ಲಿ ಬರುವಂತಹ ಜಮಜಮ ಕಾಲೂನಿ ಅಂಗನವಾಡಿ ಕೇಂದ್ರ 2ರಲ್ಲಿ ಸೇವಾಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಬಾಲ್ಯ ವಿವಾಹ ನಿಷೇಧ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳಲಾಯಿತು. ಕಾರ್ಯಕ್ರಮದಲ್ಲಿ ಮಹಿಳೆಯರನ್ನು ಉದ್ದೇಶಿಸಿ ಶ್ರೀಮತಿ ಜಗದೇವಿ ಅವರು ಮಾತನಾಡಿದರು.ಬಾಲ್ಯ ವಿವಾಹ ತಡೆಗಟ್ಟಲು ಕಾಯ್ದೆ 1978 ರಲ್ಲಿ ಕಾನೂನು ಪ್ರಕಾರ ನಿಷೇದಿಸಲಾಗಿದೆ.ಈ ಕಾಯ್ದೆ ಪ್ರಕಾರೆ ಬಾಲ್ಯ ವಿವಾಹ ನಿಲ್ಲಿಸುವುದು ಮಾತ್ರವಲ್ಲ ಅದನ್ನು ಸಂಪೂರ್ಣ ರದ್ದು ಗೋಳಿಸುವುದಾಗಿತ್ತು. ಕಾನೂನಿನ ಪ್ರಕಾರ ಪುರುಷರ 25 ವಯಸ್ಸಿನ ಮಿತಿಯನ್ನು ಕನಿಷ್ಠ ಹಾಗೂ ಮಹಿಳೆಯರಿಗೆ 21 ವರ್ಷ ನಿಗದಿಪಡಿಸಲಾಗಿದೆ.ಹೇಣ್ಣು ಮಕ್ಕಳು ದೈಹಿಕವಾಗಿ ಹಾಗೂ ಮಾನಸಿಕವಾಗಿ ಸಬಲಾರಾಗಿರುವುದಿಲ್ಲ. ಒಂದುವೇಳೆ ಮದುವೆ ಮಾಡಿದರೆ ಕಾನೂನು ಪ್ರಕಾರ ಅಪರಾಧ ವಾಗುವುದು.ಬೆಳವಣಿಗೆಯಲ್ಲಿ ಕುಂಠಿತ ವಿರುವಂತಹ ಮಕ್ಕಳು ಜನಿಸಲು ಕಾರಣವಾಗುವುದು.ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳು ಅಂದರೆ ಯಾರು ಹೇಗೆ ಪತ್ತೇ ಹಚ್ಚಬೇಕು ಆ ಮಕ್ಕಳಿಗೆ ಸೇವಾಸಂಗಮ ಸಂಸ್ಥೆಯಿಂದ ಸಿಗುವ ಸೌಲಬ್ಯೆಗಳ ಹಾಗೂ ಸರ್ಕಾರಿ ಸೌಲಬ್ಯೆಗಳು ಕೋಡಿಸುವಲ್ಲಿ ಕಾರ್ಯ ನಿರ್ವಹಿಸುತ್ತದೆ ಎಂಬುದರ ಕುರಿತು ಮಾಹಿತಿ ನೀಡಿದರು.ಈ ಕಾರ್ಯಕ್ರಮದಲ್ಲಿ 15 ಜನರು ಅಂಗನವಾಡಿ ಕಾರ್ಯಕರ್ತೆಯಾದ ಶ್ರೀಮತಿ ತಯಬಾ ಅವರು ಉಪಸ್ಥಿತರಿದರು.

ದಿನಾಂಕ 8 ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ, ಸಂಯುಕ್ತಾಶ್ರಯದ್ದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಅಡಿಯಲ್ಲಿ ಕೆ.ಎಚ್.ಬಿ ಕಾಲೂನಿಯಲ್ಲಿ ಬಾಲ್ಯಾ ವಿವಾಹ ಎಂದರೇನ್ನು? 21 ವರ್ಷ ಒಳಗಿನ ಹುಡುಗ ಹಾಗೂ 18 ವರ್ಷ ಒಳಗಿನ ಹುಡುಗಿಯರ ನಡುವೇ ಇಬ್ಬರಲ್ಲಿ ಒಬ್ಬರು ನಿಗದಿತ ವಯಸ್ಸಿನ ಒಳಗಿದ್ದರು ಇಂತಹ ಮದುವೆಗೆ ಬಾಲ್ಯ ವಿವಾಹ ಎಂದು ಕರೆಯುತ್ತೆವೆ. ನಮ್ಮ ದೇಶದಲ್ಲಿ ಬಾಲ್ಯ ವಿವಾಹ ಒಂದು ದುಷ್ಪರಿಣಾಮ ಬಿರುತ್ತಿದೆ ಎಂದು ಶೀಮತಿ ಶಿವಕಾಂತ ಅವರು 10 ಜನ ಮಹಿಳೆಯರಿಗೆ ಮಾಹಿತಿ ತಿಳಿಸಿದ್ದರು. ಅಂಗನವಾಡಿ ಕಾರ್ಯಕರ್ತೆ ಶೀಮತಿ ರುಕ್ಮೀಣಿ ಉಪಸ್ಥಿತರಿದ್ದರು.

## “ಸಾಧನ ಸಲಕರಣೆಗಳ ಬಳಕೆಯಿಂದ ಮಗು ಬದಲಾವಣೆ”



ಕಲಬುರಗಿ ನಗರ ಪ್ರದೇಶದಲ್ಲಿ ಬರುವಂತಹ ಮೋಮಿನಪುರ ಕಾಲೂನಿಯಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆಯಲಿ ಕು.ಆಕಿಬ ತಂದೆ ಇಲಿಯಾಸ ಈ ಮಗುವನ್ನು 22/02/2023 ರಂದು ಗುರುತಿಸಲಾಯಿತ್ತು ಈ ಮಗುವಿಗೆ ನಮ್ಮ ಸೇವಾಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ, ಕಲಬುರಗಿ ಅವರ ವತಿಯಿಂದ Standing frame, AFFO, Gettar. DDW Office ಕಡೆಯಿಂದ Wheel chair ಆ ಮಗುವಿಗೆ ವಿತ್ತರಿಸಲಾಯಿತ್ತು ಆ ಸಾಧನ ಸಲಕರಣೆಗಳ ಬಳಕೆಯಿಂದ ಮಗು ಬದಲಾವಣೆ ಹೊಂದುತ್ತಿದೆ ಎಂದು ಹೇಳಬಹುದು.

## “ಆಪ್ತ ಸಮಾಲೋಚನ ಸಭೆ”



ಕಲಬುರಗಿ ತಾಲೂಕಿನ ಜಾಫ್ರಾಬಾದ್ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಜನೇವರಿ 11 ರಂದು ಅಜೀಂ ಪ್ರೇಮಜೀ ಫೌಂಡೆಶನ್ ವತಿಯಿಂದ ಆಪ್ತ ಸಮಾಲೋಚನ ಸಭೆ ಹಮ್ಮಿಕೊಳ್ಳಲಾಯಿತು.ಈ ಕಾರ್ಯಕ್ರಮದಲ್ಲಿ ಸೇವಾಸಂಗಮ ಸಂಸ್ಥೆಯ ಕಾರ್ಯಕರ್ತೆಯಾದ ಕು.ಲಕ್ಷ್ಮೀಅವರು್ಲ 0–6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಗುವಿಗೆ 3 ತಿಂಗಳಿಗೆ ಕತ್ತು ನಿಲ್ಲಬೇಕು, ಒಂದು ವೇಳೆ ನಿಂತುಕೊಳ್ಳದ್ದಿದ್ದರೆ ಮಗುವಿನ ಬೆಳವಣಿಗೆಯಲ್ಲಿ ಕುಂಠಿತವಾಗಿದೆ ಎಂದು ಅರ್ಥೈಸಿಕೊಂಡು ವಿಶ್ಲೇಷಣೆ ಮಾಡಲಾಗುತ್ತದೆ.ಗುರುತಿಸಿದ ಮಕ್ಕಳನ್ನು ಚೇತನ ಕೇಂದ್ರಕ್ಕೆ ಬರುವಂತೆ ತಿಳಿಸಲಾಯಿತು.ಇದರಲ್ಲಿ 30 ಶಿಕ್ಷಕಿಯರು ಮತ್ತು ಶಿಕ್ಷಕರು ಉಪಸ್ಥಿತರಿದ್ದರು.

## “ಟೆಂಟ್ ಅವೆರನ್ಸ ಜಾಗೃತಿ ಕಾರ್ಯಕ್ರಮ”



ಕಲಬುರಗಿ ಶಿವಲಿಂಗೇಶ್ವರ ಪಲ್ಲಕಿ ಮಹೋತ್ಸವದಲ್ಲಿ ಶೀಘ್ರ ಪತ್ತೆ ಹಚ್ಚುವಿ ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜೀ ಫೌಂಡೇಶನ ಸಂಯೋಗದಲ್ಲಿ ಜನೇವರಿ 15 ರಂದು ಕಲಬುರಗಿ ತಾಲ್ಲೂಕಿನ ಸಾವಳಗಿ ಗ್ರಾಮಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಅಡಿಯಲ್ಲಿ ಟೆಂಟ್ ಅವೆರನ್ಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. 0–6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳನ್ನು ಹೇಗೆ ಗುರುತಿಸಬೇಕು, ಗುರುತಿಸಿದ ಮಕ್ಕಳನ್ನು ವಿಶ್ಲೇಷಣೆ ಮಾಡುವುದರ ಮೂಲಕ ಹೇಗೆ ಚಟುವಟಿಕೆಯನ್ನು ಮಾಡುತ್ತಿವಿ ಎಂಬುದರ ಕುರಿತು, ಲಕ್ಷ್ಮೀ ತಿಳಿಸಿದರು.ಇದರಲ್ಲಿ ಒಟ್ಟು 300 ಗ್ರಾಮಸ್ಥರು ಭಾಗವಹಿಸಿದರು.ಈ ಕಾರ್ಯಕ್ರಮದ ಮೂಲಕ ಒಂದು ಮಗುವನ್ನು ಪತ್ತೆಹಚ್ಚಲಾಯಿತು.

## “ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಬಗ್ಗೆ ಮಾಹಿತಿ”



ಜನವರಿ 3 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜೀ ಫೌಂಡೇಶನ ಸಂಯೋಗದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಕುರಿತು ನಂದಿಕೂರು ಗ್ರಾಮದಲ್ಲಿ ಬರುವ ಬಸವ ಪ್ರಭು ಶಾಲೆಯಲ್ಲಿ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಬಗ್ಗೆ ಮಾಹಿತಿ ನೀಡಲಾಯಿತು. ನಾವು ನಮ್ಮ 0–6 ವರ್ಷದೊಳಗಿನ ಮಕ್ಕಳ ಜೊತೆ ಕೆಲಸ ಮಾಡುತ್ತೇವೆ ಬೆಳವಣಿಗೆಯಲ್ಲಿ ಹಿಂದುಳಿದ ಮಕ್ಕಳು ಎಂದರೆ ಮಗು ಹುಟ್ಟಿದ ತಕ್ಷಣ ಅಳಬೇಕು ಮಗು 3 ತಿಂಗಳಿಗೆ ತಾಯಿಯನ್ನು ನೋಡಿ ಪ್ರಕ್ರಿಸಬೇಕು 3 ತಿಂಗಳಿಗೆ ಮಗುವಿನ ಕತ್ತು ನಿಲ್ಲಬೇಕು ಒಂದು ವರ್ಷದ ಮಗು 10 ಪದಗಳನ್ನು ಮಾತನಾಡಬೇಕು.3 ವರ್ಷದ ಮಗು ಅಂಗನವಾಡಿಗೆ ಹೋಗಬೇಕು 6 ವರ್ಷದ ಮಗು ಸಮಾಜಿಕವಾಗಿ ಬೇರೆತುಕೊಳ್ಳಬೇಕು.ಈ ಮೇಲಿನ ಅಂಶಗಳು ಮಕ್ಕಳಲ್ಲಿ ಕಂಡು ಬರದೆ ಇದ್ದಲಿ, ಮಗುವಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದೆ ಎಂದು ತಿಳಿದುಕೊಳ್ಳಬೇಕು ಇಂತಹ ಮಕ್ಕಳು ನಮ್ಮ ಸಂಸ್ಥೆಗೆ ತಿಳಿಸಿ ಎಂದು ಶ್ರೀಮತಿ ದಾಕ್ಷಾಯಣಿಅವರು ವಿದ್ಯಾರ್ಥಿಗಳಿಗೆ ಮಾಹಿತಿ ತಿಳಿಸಿದರು.ಈ ಕಾರ್ಯಕ್ರಮದಲ್ಲಿ 40 ವಿದ್ಯಾರ್ಥಿಗಳು ಶಾಲೆಯ ಶಿಕ್ಷಕಿಯರು ಉಪಸ್ಥಿತರಿದ್ದಾರೆ.

## “ರಾಷ್ಟ್ರೀಯ ಹೆಣ್ಣುಮಕ್ಕಳ ದಿನಾಚರಣೆ”



ರಾಷ್ಟ್ರೀಯ ಹೆಣ್ಣು ಮಗುವಿನ ದಿನಾಚರಣೆ ಕಲಬುರಗಿ ತಾಲ್ಲೂಕಿನಲ್ಲಿ ಬರುವ ಫರಹತಬಾದ ಗ್ರಾಮದ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ “ರಾಷ್ಟ್ರೀಯ ಹೆಣ್ಣುಮಕ್ಕಳ ದಿನಾಚರಣೆ” ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.ಕಾರ್ಯಕ್ರಮವನ್ನು ಸಸಿಗೆ ನೀರನ್ನು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿದ ಶ್ರೀಮತಿ ಗಂಗುಬಾಯಿ ವಲಯ ಆರೋಗ್ಯ ಅಧಿಕಾರಿಗಳು ಇವರು ಪ್ರತಿ ಹೆಣ್ಣು ಮಗವು ಗೌರವ, ಪ್ರೀತಿ ಹಾಗೂ ಸಮಾನತೆಯಿಂದ ಬೆಳೆಯಲು ಅರ್ಹರಾಗಿದ್ದಾರೆ, ಇದನ್ನು ನನಸಾಗಿಸುವ ಜವಾಬ್ದಾರಿ ನಮ್ಮದು ಹಾಗೂ ನಿಮ್ಮೆಲ್ಲರದಾಗಿದೆ ಎಂದು ಹೇಳಿದರು.ಕಾರ್ಯಕ್ರಮದಲ್ಲಿ ಶ್ರೀ ರಾಜಕುಮಾರಕಾ ರ್ಯಕರ್ತರು ಸೇವಾಸಂಗಮ ಸಂಸ್ಥೆ, ಕಲಬುರಗಿ ಇವರು ಮಾತನಾಡಿ ರಾಷ್ಟೀಯ ಹೆಣ್ಣು ಮಕ್ಕಳ ದಿನಾಚರಣೆಯನ್ನು ಪ್ರತಿ ವರ್ಷ ಜನವರಿ 24ಕ್ಕೆ ಆಚರಿಸಲಾಗುತ್ತದೆ.2008ರಲ್ಲಿ ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಸಚಿವಾಲಯದಿಂದ ಈ ದಿನಾಚರಣೆಯನ್ನು ಆಚರಿಸಲು ಪ್ರಾರಂಭಿಸಲಾಯಿತು. ಹೆಣ್ಣು ಮಕ್ಕಳ ಸಬಲೀಕರಣ ಹಾಗೂ ರಕ್ಷಣೆಯ ಮಹತ್ವವನ್ನು ತಿಳಿಸುವುದು ಈ ದಿನಾಚರಣೆಯ ಪ್ರಮುಖ ಉದ್ದೇಶವಾಗಿದೆ. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ, ಹೆಣ್ಣು ಸಮಾಜದ ಕಣ್ಣು, ಹೆಣ್ಣು ಮಕ್ಕಳ ಸಾಧನೆ ಸವಾಲುಗಳನು ್ಚರ್ಚೆ ಮಾಡುವ ಪ್ರಮುಖ ದಿನಗಳಲ್ಲಿ ಜನವರಿ24 ಸಹ ಒಂದು.ಇಂದು ರಾಷ್ಟೀಯ ಹೆಣ್ಣು ಮಕ್ಕಳದಿನ. ಭಾರತದಲ್ಲಿ ಹೆಣ್ಣು ಮಕ್ಕಳು ಎದುರಿಸುವ ಸವಾಲುಗಳು ಹಾಗೂ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದು, ಹೆಣ್ಣು ಮಕ್ಕಳ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು ಸೇರಿದಂತೆ ಹಲವು ಪ್ರಮುಖ ವಿಷಯಗಳಿಗೆ ಈ ದಿನವನ್ನು ಮೀಸಲಿರಿಸಲಾಗಿದೆ.ಎಂದು ಹೇಳಿದರು ಕಾರ್ಯಕ್ರಮದಲ್ಲಿ 15 ಜನ ಮಹಿಳೆಯರು ಭಾಗವಹಿಸಿದರು.



## “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಜಾಗೃತಿ ಕಾರ್ಯಕ್ರಮ”

ಕಲಬುರಗಿ ತಾಲ್ಲೂಕಿನಲ್ಲಿ ಬರುವ ಕೆಸರಟಗಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವಾಸಂಗಮ ಸಂಸ್ಥೆ, ಅಜೀಂ ಪ್ರೇಮಜಿ ಫೌಂಢೇಶನ, ಕಲಬುರಗಿ ಹಾಗೂ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಇವರ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ರಾಜಕುಮಾರ ಮಾತನಾಡಿ ಮಕ್ಕಳ ಬೆಳವಣಿಗೆಯ ಹಂತಗಳ ಕುರಿತು ಮಾಹಿತಿಯನ್ನು ನೀಡಿದರು.ಕಾರ್ಯಕ್ರಮದಲ್ಲಿ 30 ಜನ ಮಕ್ಕಳು ಭಾಗವಹಸಿಸರು.



## “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಜಾಗೃತಿ ಕಾರ್ಯಕ್ರಮ”



ಕಲಬುರಗಿ ನಗರ ಪ್ರದೇಶದಲ್ಲಿ ಬರುವಂತಹ ವಿಜಯನಗರ ಕಾಲೋನಿಯ ವಿದ್ಯಾಚೇತನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜನೆವರಿ 18ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ, ಕಲಬುರಗಿ ಇವರ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮೀಕೊಳಲಾಯಿತು. ಕಾರ್ಯಕ್ರಮದಲ್ಲಿ ಶ್ರೀಮತಿ ವಿಜಯಲಕ್ಷ್ಮೀಅವರು ನೀಡಿದರು. ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಅಂದರೆ 0–6 ವರ್ಷದ ಒಳಗಿನ ವಿಶೇಷ ಚೇತನವುಳ್ಳ ಮಕ್ಕಳನ್ನು ನಾವು ಪತ್ತೆ ಹಚ್ಚಿ ಆ ಮಗುವಿಗೆ ವಿಶ್ಲೇಷಣೆ ಮಾಡಿ ಆ ಮಗುವಿಗೆ ಬೇಕಾಗಿರುವ ಸಾಧನಾ ಸಲಕರಣೆ ನೀಡಿ ಆ ಮಗುವಿಗೆ ಚಟುವಟಿಕೆ ಮಾಡಿಸುವುದರ ಮೂಲಕ ಮಗುವಿನಲ್ಲಿ ಸ್ವಲ್ಪಮಟ್ಟಿಗೆ ಮಗುವಿನಲ್ಲಿ ಬದಲಾವಣೆ ತರುವಂತಹ ಕೆಲಸ ನಮ್ಮ ಸೇವಾಸಂಗಮ ಸಂಸ್ಥೆ ಮಾಡುತ್ತಿದೆ ಎಂದು ಹೇಳಬಹುದು

## “ಜಿಲ್ಲಾ ಮಟ್ಟದ ಪೋಷಕರ ಗುಂಪು ರಚನೆ”



ಜನೆವರಿ 20 ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಂಜೀ ಫೌಂಡೇಶನ್, ಕಲಬುರಗಿ ಇವರ ಸಂಯುಕ್ತ ಆಶ್ರಯದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಪೋಷಕರ ಜಿಲ್ಲಾ ಮಟ್ಟದ ಗುಂಪು ರಚನೆ ಮಾಡಲಾಯಿತು. (parents Champion Group) ಈ ಕಾರ್ಯಕ್ರಮವನ್ನು ಉದ್ದೇಶಿಸಿ ಸೇವಾಸಂಗಮ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ದೀಪಕ್ಅವರು ಮಾತನಾಡುತ, ಪಾಲಕರ ಗುಂಪು ಅಗತ್ಯವಿದೆ.ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಭವಿಷ್ಯಕ್ಕಾಗಿ ಮತ್ತು ಸರ್ಕಾರದ ಸೌಲಭ್ಯೆಗಳಿಂದ ವಂಚಿತರಾಗಿರುವ ಮಕ್ಕಳಿಗೆ ಸೌಲಭ್ಯ ಪಡೆದುಕೋಳ್ಳಲು ಈ ಗುಂಪು ಅವಶ್ಯಕತೆ ಇದೆ ಎಂಬುದರ ಕುರಿತು ಮಾಹಿತಿ ತಿಳಿಸಿದರು.ಕಾರ್ಯಕ್ರಮದ ವ್ಯವಸ್ಥಾಪಕರಾದ ಶ್ರೀಮತಿ ಶ್ವೇತಾಅವರು ಮಾತನಾಡಿ ಬೆಳೆವಣಿಗೆಯಲ್ಲಿ ಕುಂಟಿತವಿರುವ ಮಕ್ಕಳ ಪಾಲಕರ ಅಭಿವೃದ್ದಿ ಮಾಡುವುದಾಗಿದೆ ಎಂದು ಹೇಳಿದರು.ಕಾರ್ಯಕ್ರಮದಲ್ಲಿ ಸೇವಾಸಂಗಮ ಸಂಸ್ಥೆಯ ಕಾರ್ಯಕರ್ತರು ಹಾಗೂ 22 ಪೋಷಕರ ಉಪಸ್ಥಿತರಿದ್ದರು.

## “ಮದರ್ ತೆರೆಸಾ ಸಭಾಂಗಣದಲ್ಲಿ ಪೋಷಕರ ಸಾಮರ್ಥ್ಯಬಲವರ್ಧನೆ ತರಬೇತಿ”



ಜನೆವರಿ 31 ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ ಜಿ ಫೌಂಢೆಶನ್ ಸಂಯುಕ್ತ ಆಶ್ರಯದಲ್ಲಿ ಕಲಬುರಗಿ ನಗರ ಪ್ರದೇಶದಲ್ಲಿರುವ ಮದರ್ ತೆರೆಸಾ ಸಭಾಂಗಣದಲ್ಲಿ ಪಾಲಕರ ಸಾಮರ್ಥ್ಯಬಲವರ್ಧನೆ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಸೇವಾಸಂಗಮ ಸಂಸ್ಥೆಯ ಬದ್ರರ್ರಾಯಿ ಸ್ಟೆನ್ಅವರು ಪಾಲಕರು ಮಕ್ಕಳನ್ನು ಮನೆಯಲ್ಲಿ ಹೇಗೆ ಪ್ರೀತಿ ಕಾಳಜಿಯಿಂದ ನೋಡಿಕೊಳ್ಳಬೇಕು ಎಂದು ತಿಳಿಸಿದರು.ಮಕ್ಕಳಲ್ಲಿರುವ ತೀವ್ರತೆಯನ್ನು ಕಡಿಮೆ ಮಾಡಲು ಮನೆಯಲ್ಲಿ ಇರುವಅಂತಹ ವಸ್ತುಗಳನ್ನು ಉಪಯೋಗಿಸಿಕೊಂಡು ಚಟುವಟಿಕೆ ಮಾಡಿಸಬೇಕೆಂದು ಶ್ರೀಮತಿ ಶಿವಕಾಂತ್ ಅವರು ತರಬೇತಿ ನೀಡಿದರು.ಈ ತರಬೇತಿಯಲ್ಲಿ 3 ಪಿ.ಎಚ್.ಸಿ 60 ಜನ ಪೋಷಕರ ಭಾಗವಹಿಸಿದರು.ಸೇವಾಸಂಗಮ ಸಂಸ್ಥೆಯ ಕಾರ್ಯಕರ್ತರಾದ ಅನಿತಾ, ಜಗದೇವಿ, ಲಕ್ಷ್ಮೀ, ರಾಜಕುಮಾರ್, ದಾಕ್ಷೀಣಿ, ವಿಜಯಲಕ್ಷ್ಮೀ, ಮಾಲಾಶ್ರೀ ಉಪಸ್ಥಿತರಿದ್ದರು.

## “ಗಾಲಿಕುರ್ಚಿ ವಿತರಣೆ ಕಾರ್ಯಕ್ರಮ”



ಕಲಬುರಗಿ ನಗರದ ಮದರ ತೆರಿಸಾ ಸಭಾಂಗಣದಲ್ಲಿ ಸೇವಾಸಂಗಮ ಸಂಸ್ಥೆಯ ವತಿಯಿಂದ ವಿಕಲ ಚೇತನರಿಗೆ “ಉಚಿತ ಗಾಲಿ ಕುರ್ಚಿ ವಿತರಣೆ” ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಫಾದರ ಸ್ಟ್ಯಾನಿ ಲೋಬೋ ಶ್ರೇಷ್ಠ ಗುರುಗಳು ಕಲಬುರಗಿ ಧರ್ಮಕ್ಷೇತ್ರ ಇವರು ಸಮಾಜದಲ್ಲಿರುವ ಪ್ರತಿಯೋಬ್ಬರು ಒಂದಲ್ಲ ಒಂದು ರೀತಿಯಾ ವೈಕಲ್ಯತೆಯಿಂದ ಬಳಲುತ್ತಿರುತ್ತಾರೆ ಅದರಲ್ಲಿ ಕೆಲವು ವೈಕಲ್ಯತೆಗಳು ಅವರ ಜೀವನವನ್ನು ಸಂಕಷ್ಟಗಳಿಗೆ ಸಿಲುಕುವಂತೆ ಮಾಡುತ್ತದೆ. ಇದ್ದರಿಂದ ನೊಂದು–ಬೆಂದು ಹೊರಬರದೆ ಖಿನ್ನತೆಗೆ ಒಳಗಾಗುತ್ತಾರೆ.ಇವರು ಸಮಾಜದ ಕಟ್ಟ-ಕಡೆಯ ವ್ಯಕ್ತಿಗಳ ಗುಂಪಿಗೆ ಸೇರಿಕೋಳ್ಳುತ್ತಾರೆ.ಇಂತವರ ಅಭಿವೃದ್ಧಿಗಾಗಿ ಸೇವಾಸಂಗಮ ಸಂಸ್ಥೆಯಂತಹ ಸಂಸ್ಥೆಗಳು ಹಗಲಿರುಳು ಸೇವೆಯನ್ನು ಸಲ್ಲಿಸುತ್ತಿರುವುದು ಶ್ಲಾಘನಿಯ ವಿಷಯವಾಗಿದೆ. ನಿಮ್ಮನ್ನು ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ನಿಮ್ಮ ಸಮಸ್ಯೆಗಳನ್ನು ಅರಿತು ತಮ್ಮ ಜೀವನಕ್ಕೆ ಸಹಾಯವಾಗಲು ಸೇವಾಸಂಗಮ ಸಂಸ್ಥೆವತಿಯಿಂದ ಈ ದಿನ ಉಚಿತ ಗಾಲಿ ಕುರ್ಚಿಯನ್ನು ತಮ್ಮಗೆ ನೀಡಲಾಗತ್ತಿದೆ ಈ ಸಾಧನ ಸಲಕರಣೆಗಳನ್ನು ಪಡೆದುಕೊಂಡು ತಮ್ಮ ಜೀವನವನ್ನು ಹೊಸ ಹುಮಸ್ಸಿನಿಂದ ಸತ್ಯದ ಬೆಳಕಿನಕಡೆ ನಿಮ್ಮ ನಡೆಯಾಗಿಲಿ ಎಂದು ಹಾರೈಸಿದರು. ಕಾರ್ಯಕ್ರಮವನು ಉದ್ದೇಶಿಸಿ ಮಾತನಾಡಿದ ಫಾದರ ವಿಕ್ಟರ್ವಾಸ್ ನಿರ್ದೇಶಕರು ಸೇವಾಸಂಗಮ ಸಂಸ್ಥೆ ಅಂಗ ವೈಕಲತೆಯನ್ನುವುದು ದೇಹಕ್ಕೆ ಹೊರತು ನಿಮ್ಮ ಉತ್ತಮವಾದ ಆಲೋಚನೆಗಳಿಗೆ - ವಿಚಾರಗಳನ್ನು ಆವರಿಸಬಾರದು ಸಮಾಜದಲ್ಲಿ ವಿಕಲ ಚೇತನರು ನಾವು ಯಾರಿಗಿಂತ ಕಡಿಮೆಯಿಲ್ಲ ಎನ್ನುವಂತೆ ಸಾದನೆಯ ಶಿಖರವನ್ನು ಏರಿದವರು ಇದ್ದಾರೆ ಅಂತವರು ನಿಮ್ಮ ಜೀವನಕ್ಕೆ ಸ್ಫರ್ತಿಯಾಗಬೇಕು ಸಂಸ್ಥೆಯ ವತಿಯಿಂದ  ನೀಡಿದ ಈ ಸಾಧನ ಸಲಕರಣೆಗಳನ್ನು ಉತ್ತಮ ರೀತಿಯಲ್ಲಿ ಬಳಿಸಿಕೊಳ್ಳುವ ಮೂಲಕ ಇದರ ಸದುಪಯೋಗವನ್ನು ತಾವು ಪಡೆದುಕೊಂಡಲ್ಲಿ ನಾವು ನೀಡಿದಕ್ಕೂ ಸಾರ್ಥಕವಾಗುತ್ತದೆ. ನಿಮ್ಮ ಜೀವನದಲ್ಲಿ ಬೆಳಕಿನ ಕಿರಣಗಳಾಗಲಿ ಎಂದು ಹೇಳಿದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದಂತಹ ಶ್ರೀ ರೋಹನ್ ಫ್ರ್ಯಾಂಕೋ ಪ್ರಾದೇಶಿಕ ವ್ಯವಸ್ಥಾಪಕರು ಅಸ್ಟರ್ ಡಿ.ಎಮ್ ಫೌಂಢೇಶನ, ಬೆಂಗಳುರ್ ಇವರು ಮಾತನಾಡಿ ಈ ಗಾಲಿ ಕುರ್ಚಿಯನ್ನು ತಮ್ಮ ಜೀವನದ ರಥವನ್ನಾಗಿಸಿಕೊಂಡು ಅದರ ಸಾರಥಿಗಳಾಗಿ ಜಿವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಎದುರಿಸಿ ಉತ್ತಮ ಸಮಾಜವನ್ನು ನಿರ್ಮಿಸೋಣ ಎಂದು ಹೇಳಿದರು. ಕಾರ್ಯಕ್ರಮದಲ್ಲಿ 15 ಜನ ಫಲಾನುಭವಿಗಳಿಗೆ ಗಾಲಿ ಕುರ್ಚಿಗಳನ್ನು ಉಚಿತವಾಗಿ ಸೇವಾ ಸಂಗಮ ಸಂಸ್ಥೆವತಿಯಿಂದ ವಿತರಿಸಲಾಯಿತು. ಕಾರ್ಯಕ್ರವನ್ನು ಅನಿತ ಮತ್ತು ಲಕ್ಷ್ಮಿ ಸಂಗಡಿಗರ ಹಾಡಿನ ಮೂಲಕ ಪ್ರಾರಂಭಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಾಸ್ತವಿಕ ನುಡಿಗಳನ್ನು ಶ್ರೀಮತಿ ಶಿವಕಾಂತರವರು ನುಡಿದರು, ಶ್ರೀಮತಿ ದಾಕ್ಷಾಯಣಿ ನಿರುಪಿಸಿ ಶ್ರೀಮತಿ ಜಗದೇವಿ ಸ್ವಾಗತಿಸಿ ಶ್ರೀ ರಾಜಕುಮಾರ ವಂದಿಸಿದರು. ಈ ಕಾರ್ಯಕ್ರಮದಲ್ಲಿ ವಿಕಲ ಚೇತನರು, ಮಕ್ಕಳು ಹಾಗೂ ಪಾಲಕರು/ ಪೋಷಕರು ಒಟ್ಟು 60 ಜನರು ಭಾಗವಹಿಸಿದರು.

## "ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಮತ್ತು ಸೇವಾಸಂಘಮ ಸಂಸ್ಥೆ ಕಾರ್ಯಕ್ರಮಗಳು"

# ಬಡವರಿಗೆ ಪುನರ್ಜನ್ಮ ನೀಡಿದ ಆರ್ಬಿಟ್ ಸಂಸ್ಥೆ





ಭಾರತ ವೈಭವ ಸುದ್ದಿ

ಹುಮನಾಬಾದ: ಆರ್ಬಿಟ್ ಸಂಸ್ಥೆಯು ೩೦ ವರ್ಷಗಳಿಂದ ಬಡವರ ಕಣ್ಣೀರು ಒರೆಸುವ ಕೆಲಸ ಮಾಡಿದೆ. ಸಂಸ್ಥೆಯು ಹಲವಾರು ಯೋಜನೆಗಳ ಮುಖಾಂತರ ಸಮುದಾಯದಿಂದ ತಳ್ಳಲ್ಪಟ್ಟವರ, ನೋವಿಗೆ ಸ್ಪಂದಿಸುವ ಕಾರ್ಯ ಮಾಡಿದೆ ಎಂದು ಗುಲ್ಬರ್ಗ ಧರ್ಮ ಕ್ಷೇತ್ರದ ಧರ್ಮಾಧಿಕಾರಿಗಳಾದ ಡಾ. ರಾಬರ್ಟ್ ಮೈಕಲ್ ಮಿರಂದ ಹೇಳಿದರು.

ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ಜನವರಿ ೧೬ ಗುರುವಾರ ಸಂಸ್ಥೆಯ ೩೦ ವರ್ಷದ ಜುಬುಲಿ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿಧಾನ ಪರಿಷತ್ ಸದಸ್ಯರಾದ ಡಾ. ಚಂದ್ರಶೇಖರ್ ಪಾಟೀಲರು ಮಾತನಾಡಿ, ಸಂಸ್ಥೆ ೩೦ ವರ್ಷಗಳಲ್ಲಿ ಮಾಡಿದ ಸೇವೆಯು ಸುವರ್ಣ ಅಕ್ಷರಗಳಲ್ಲಿ ಬರೆಯುವಂತದ್ದು. ದೀನರ, ದಲಿತರ, ದಿಕ್ಕಿಲ್ಲದವರಿಗಾಗಿ ಸದಾ ಸೇವೆಯನ್ನು ಮಾಡುತ್ತಿದೆ. ವಿಶೇಷವಾಗಿ ಆರೋಗ್ಯ ಕ್ಷೇತ್ರ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಜನರ ಜೀವನ ಮಟ್ಟ ಉನ್ನತ ಮಟ್ಟಕ್ಕೆ ಏರಿಸುವಲ್ಲಿ ಸಂಸ್ಥೆಯ ಪಾತ್ರ ತುಂಬಾ ದೊಡ್ಡದಾಗಿದೆ ಎಂದರು.

ಫಾದರ ಸಂತೋಷ ಡಯಾಸ, ೩೦ ವರ್ಷಗಳಲ್ಲಿ ಸಂಸ್ಥೆ ಬೆಳೆಯುವುದರೊಂದಿಗೆ ಸಂಸ್ಥೆಯ ಫಲಾನುಭವಿಗಳಾದ ಮಹಿಳೆಯರು ಸಹ ಬೆಳೆದಿರುವುದು ತುಂಬಾ ಸಂತೋಷದ ಸಂಗತಿ. ಪೂರ್ವದಲ್ಲಿ ಮಹಿಳಾ ಸ್ವಸಹಾಯ ಸಂಘಗಳನ್ನು ರಚಿಸುವಾಗ ಅನೇಕ ಅಡೆತಡೆಗಳು ಎದುರಾದವು ನಂತರ ನಿರಂತರ ಪ್ರಯತ್ನದಿಂದ ಮುಂದೆ ಮಹಿಳೆಯರು ಸಕ್ರಿಯವಾಗಿ ಸ್ವಸಹಾಯ ಸಂಘಗಳಲ್ಲಿ ಪಾಲ್ಗೊಳ್ಳುವ ಮೂಲಕ ಆರ್ಥಿಕ ಸ್ವಾತಂತ್ರ್ಯವನ್ನು ಪಡೆದುಕೊಂಡಿರುವುದು ಎಲ್ಲರಿಗೂ ಮಾದರಿಯ ವಿಷಯ. ಚಪ್ಪಾಳೆ ತಟ್ಟುವ ಕೈಗಿಂತ ಕಣ್ಣೀರು ಒರೆಸುವ ಒಂದು ಬೆರಳು ಶ್ರೇಷ್ಠ' ಆರ್ಬಿಟ್ ಸಂಸ್ಥೆಯ ಪರಿಶ್ರಮ ಇದರಲ್ಲಿ ಎದ್ದು ಕಾಣುತ್ತದೆ ಎಂದರು.

ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ರಾಜ್ಯ ಆಯುಕ್ತ ದಾಸ್ ಸೂರ್ಯವಂಶಿ, ಮೌಲಾನಾ ತಸದ್ದುಗ್ ಶಾಬ್ ನದವೆ, ಕ್ಲೇರಿ ಡಿಸೋಜಾ, ಸಂತೋಷ್ ಪಾಟೀಲ, ಡಾ. ನಾಗನಾಥ ಹುಲಸೂರೆ, ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಡಾ. ಗುರುರಾಜ ಕುಲಕರ್ಣಿ, ಶ್ರೀನಿಧಿ ಸೇರಿ ಅನೇಕರು ಉಪಸ್ಥಿತರಿದ್ದರು.

ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಸ್ವಾಗತಿಸಿದರು. ಫಾದರ್ ಸಚಿನ್, ಸಿಸ್ಟರ್ ಕ್ರಿಸ್ಟಿನ ನಿರೂಪಿಸಿದರು, ಸವಿತಾ ವಂದಿಸಿದರು.

---

ಸಂಯುಕ್ತ ಕರ್ನಾಟಕ

ಶತಕದತ್ತ ಓಟ... ತೊಂಬತ್ತರ ನೋಟ

# ಆರ್ಬಿಟ್ ಸಂಸ್ಥೆಯ ಕಾರ್ಯ ಕಲ್ಯಾಣ ಕರ್ನಾಟಕಕ್ಕೆ ಮಾದರಿ: ಡಾ.ಚಂದ್ರಶೇಖರ ಪಾಟೀಲ

**ಸಂ.ಕ.ಸಮಾಚಾರ ಹುಮನಾಬಾದ್**

ಆರ್ಬಿಟ್ ಸಮಾಜ ಸೇವಾ ಸಂಸ್ಥೆ ಕಾರ್ಯ ಇಡೀ ಕಲ್ಯಾಣ ಕರ್ನಾಟಕಕ್ಕೆ ಮಾದರಿ ಎಂದು ವಿಧಾನ ಪರಿಷತ್ ಸದಸ್ಯ ಡಾ.ಚಂದ್ರಶೇಖರ ಪಾಟೀಲ ಅಭಿಪ್ರಾಯಪಟ್ಟರು.

ಪಟ್ಟಣದಲ್ಲಿ ಗುರುವಾರ ನಡೆದ ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ತ್ರಿದಶಮಾನೋತ್ಸವ ಕಾರ್ಯಕ್ರಮದಲ್ಲಿ ಸ್ಮರಣ ಸಂಚಿಕೆ ಲೋಕಾರ್ಪಣೆಗೊಳಿಸಿ, ಕಳೆದ 30 ವರ್ಷಗಳಲ್ಲಿ ಮಾಡಿದ್ದು ಸಾಕಷ್ಟಿದೆ.

ಅದರ ಜತೆಯಲ್ಲಿ ಮಾಡಬೇಕೆಂಬ ಕನಸು ಬಹುದೊಡ್ಡದಿದೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆ ಅಸ್ತಿತ್ವಕ್ಕೆ ಬಂದಾಗಿನಿಂದ ದಿ.ಬಸವರಾಜ ಪಾಟೀಲ ಅವರಿಂದ ಈ ವರೆಗೆ ಪಾಟೀಲ ಪರಿವಾರ ಆರ್ಬಿಟ್ ಸಂಸ್ಥೆಯ ಪ್ರತಿಯೊಂದು ಕಾರ್ಯ ಚಟುವಟಿಕೆಗಳ ಜತೆಗಿತ್ತು. ಈಗಲೂ ಇರುತ್ತದೆ ಭವಿಷ್ಯದಲ್ಲೂ ಜತೆಗಿರುತ್ತದೆ ಎಂದರು.

ಸಾನಿಧ್ಯ ವಹಿಸಿದ್ದ ಕಲ್ಬುರ್ಗಿ ಧರ್ಮ ಕ್ಷೇತ್ರದ ಧರ್ಮಗುರು ಡಾ.ರಾಬರ್ಟ್ ಮೈಕೆಲ್ ಮಿರಾಂದ್ ಮಾತನಾಡಿ ತುಳಿತಕ್ಕೊಳಗಾದವರು, ನೊಂದವರು, ಆರ್ಥಿಕವಾಗಿ ಹಿಂದುಳಿದವರು, ವಿಶೇಷವಾಗಿ ಮಹಿಳೆಯರು, ಅದರಲ್ಲೂ ಮಾನಸಿಕ ಅಸ್ವಸ್ಥರು, ವಿಶೇಷ ಚೇತನ ಉಳ್ಳವರನ್ನು ಮುಖ್ಯವಾಹಿನಿಗೆ ತರಲು ಕಳೆದ 3ದಶಕದಿಂದ ಅವಿರತ ಶ್ರಮಿಸುತ್ತಿದೆ ಎಂದರು.

ಫಾದರ್ ಸಂತೋಷ ಡಯಾಸ್ ಅವರು ಆರ್ಬಿಟ್ ಸಂಸ್ಥೆ ಬೆಳೆದುಬಂದ ದಾರಿಯ ಬಗ್ಗೆ ಅವಲೋಕಿಸಿದರು. ಸಂಸ್ಥೆಯ ನಿರ್ದೇಶಕ ಫಾದರ್ ವಿಕ್ಟರ್ ವಾಸ್, ವಿಶೇಷಚೇತನ ಹಕ್ಕುಗಳ ರಾಜ್ಯ ಆಯುಕ್ತ ದಾಸ್ ಸೂರ್ಯವಂಶಿ ಅವರು ವಿಶೇಷ ಚೇತನರಿಗಾಗಿ ರೂಪಿಸಿರುವ ಯೋಜನೆಗಳ ಕುರಿತು ವಿವರಿಸಿದರು. ಉದ್ಯಮಿ ಸಂತೋಷ ಪಾಟೀಲ, ಡಾ.ನಾಗನಾಥ ಹುಲಸೂರೆ, ಇಂದುಮತಿ, ಲೀರಾ ಡಿಸೋಜಾ ಮೊದಲಾದವರು ವೇದಿಕೆಯಲ್ಲಿದ್ದರು.

ಇದೇ ಸಂದರ್ಭದಲ್ಲಿ ವಿಶೇಷ ಚೇತನುಳ್ಳವರಿಗೆ ವಿವಿಧ ಸಾಧನ ಸಲಕರಣೆ, ಪ್ರಮಾಣಪತ್ರ, ಆರ್ಥಿಕವಾಗಿ ದುರ್ಬಲರಾದವರಿಗೆ ಆರ್ಥಿಕ ಸಹಾಯ, ಸ್ವಯಂ ಉದ್ಯೋಗಕ್ಕಾಗಿ ಕುರಿಗಳನ್ನು ವಿತರಿಸಿದರು.



ಹುಮನಾಬಾದ್: ಪಟ್ಟಣದಲ್ಲಿ ಗುರುವಾರ ನಡೆದ ಆರ್ಬಿಟ್ ಸಂಸ್ಥೆಯ ತ್ರಿದಶಮಾನೋತ್ಸವ ಪ್ರಯುಕ್ತ ಹೊರತಂದ ಸ್ಮರಣ ಸಂಚಿಕೆಯನ್ನು ವಿಧಾನ ಪರಿಷತ್ ಸದಸ್ಯ ಡಾ.ಚಂದ್ರಶೇಖರ ಪಾಟೀಲ ಲೋಕಾರ್ಪಣಗೊಳಿಸಿದರು.

---

ನಿಸರ್ಗ ಸಾರಥ್ಯ...

ವಿದ್ಯೈತಿ ನ್ಯೂಸ್

# ಆರ್ಬಿಟ್ ಸಂಭ್ರಮಾಚಾರಣೆ



**ಹುಮನಾಬಾದ್:** ಆರ್ಬಿಟ್ ಸಂಸ್ಥೆಯ 30 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದೆ. 30 ವರ್ಷಗಳ ಸಾಧನೆ ಮತ್ತು ಕೊಡೆಗೆಯನ್ನು ಸ್ಮರಣೆ ಮಾಡಲು ಜ.16 (ಇಂದು) ಬೆಳಗ್ಗೆ 11ಗಂಟೆಗೆ ಆರ್ಬಿಟ್ ಸಂಸ್ಥೆಯಲ್ಲಿ ಸಂಭ್ರಮದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಮಾಜದ ಉದ್ಧಾರಕ್ಕಾಗಿ ನಾವು ಪಟ್ಟ ಕಷ್ಟಗಳನ್ನು, ಮಾಡಿದ ತ್ಯಾಗಗಳನ್ನು, ನಿಮ್ಮ ಜೊತೆ ಹಂಚಿಕೊಳ್ಳಲು ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಆರ್ಬಿಟ್‌ನ ಜುಬಿಲಿ ಮಹೋತ್ಸವಕ್ಕೆ ಸರ್ವರನ್ನು ಪ್ರೀತಿಪೂರ್ವಕವಾಗಿ ಸ್ವಾಗತಿಸುತ್ತೇವೆ. ಈ ಕಾರ್ಯಕ್ರಮಕ್ಕೆ ತಾವೆಲ್ಲರೂ ಬಂದು ಭಾಗವಹಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ ಎಂದು ಆರ್ಬಿಟ್ ಸಂಸ್ಥೆಯ ನಿರ್ದೇಶಕ ಫಾ.ವಿಕ್ಟರ್ ಅನಿಲ್ ವಾಸ್, ಸಹ ನಿರ್ದೇಶಕರಾದ ಫಾ.ವಿಜಯ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---



### 30 ವರ್ಷದ ಜುಬಿಲಿ ಕಾರ್ಯಕ್ರಮ ಆಚರಿಸಿಕೊಂಡ ಆರ್ಬಿಟ್ ಸಂಸ್ಥೆ

# ಬಡವರಿಗೆ ಪುನರ್ಜನ್ಮ ನೀಡಿದ ಆರ್ಬಿಟ್



ಯಾದಗಿರಿ ಎಕ್ಸ್‌ಪ್ರೆಸ್

**ಹುಮನಾಬಾದ್:** ಆರ್ಬಿಟ್ ಸಂಸ್ಥೆಯು 30 ವರ್ಷಗಳಿಂದ ಬಡವರ ಕಣ್ಣೀರು ಒರೆಸುವ ಕೆಲಸ ಮಾಡಿದೆ. ಸಂಸ್ಥೆಯಿಂದ ಹಲವಾರು ಯೋಜನೆಗಳ ಮುಖಾಂತರ ಸಮುದಾಯದಿಂದ ಅಂಚಿಗೆ ತಳ್ಳಲ್ಪಟ್ಟವರ, ನೋವಿಗೆ ಸ್ಪಂದಿಸುವ ಕಾರ್ಯ ಮಾಡಿದೆ. ಸಂತ ಮದರ್ ತೆರೇಸಾ ಅವರ ತತ್ವಾದರ್ಶಗಳನ್ನು ಅಳವಡಿಸಿಕೊಂಡು ಬಡವರ ಸೇವೆಯೇ ದೇವರ ಸೇವೆ 30 ವರ್ಷಗಳಿಂದ ಸೇವೆಯನ್ನು ಮಾಡಿಕೊಂಡು ಬರುತ್ತಿದೆ. ಈ ಸೇವೆ ಮಾಡುವಲ್ಲಿ ಸಂಸ್ಥೆಯ ಕಾರ್ಯಕರ್ತರ ಪಾತ್ರ ತುಂಬಾ ಪ್ರಮುಖವಾದದ್ದು. ಮುಂದಿನ ದಿನಗಳಲ್ಲಿ ಸಂಸ್ಥೆಯಿಂದ ಇನ್ನೂ ಹೆಚ್ಚಿನ ರೀತಿಯಿಂದ ಸೇವೆಗಳು ಜನರಿಗೆ ಲಭಿಸಲಿ ಎಂದು ಹಾರೈಸುತ್ತೇನೆ ಎಂದು ಗುಲ್ಬರ್ಗ ಧರ್ಮ ಕ್ಷೇತ್ರದ ಧರ್ಮಾಧಿಕಾರಿಗಳಾದ ಡಾಕ್ಟರ್ ಮೈಕಲ್ ಮಿರಂದ ಕಾರ್ಯಕ್ರಮದ ಘನ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಹುಮ್ನಾಬಾದ್ ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ಜನವರಿ 16 ರಂದು ಸಂಸ್ಥೆಯ 30 ವರ್ಷದ ಜುಬಿಲಿ ವಾರ್ಷಿಕೋತ್ಸವವನ್ನು ಅತಿ ವಿಜೃಂಭಣೆಯಿಂದ ಆಚರಿಸಲಾಯಿತು. ಮುಖ್ಯ ಅತಿಥಿಯಾಗಿ ಆಗಮಿಸಿದ ವಿಧಾನ ಪರಿಷತ್ ಸದಸ್ಯರಾದ ಡಾ. ಚಂದ್ರಶೇಖರ್ ಪಾಟೀಲರು ಮಾತನಾಡಿ, ಸಂಸ್ಥೆ 30 ವರ್ಷಗಳಲ್ಲಿ ಮಾಡಿದ ಸೇವೆಯು ಸುವರ್ಣ ಅಕ್ಷರಗಳಲ್ಲಿ ಬರೆಯುವಂತದ್ದು. ದೀನರ, ದಲಿತರ, ದಿಕ್ಕಿಲ್ಲದವರಿಗಾಗಿ ಸದಾ ಸೇವೆಯನ್ನು ಮಾಡುತ್ತಿದೆ. ವಿಶೇಷವಾಗಿ ಆರೋಗ್ಯ ಕ್ಷೇತ್ರ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಜನರ ಜೀವನ ಮಟ್ಟ ಉನ್ನತ ಮಟ್ಟಕ್ಕೆ ಏರಿಸುವಲ್ಲಿ ಸಂಸ್ಥೆಯ ಪಾತ್ರ ತುಂಬಾ ದೊಡ್ಡದಾಗಿದೆ. ಸ್ಥಾಪನೆಯಾಗಿ ಇಲ್ಲಿಯವರೆಗೆ ಮಾಡಿರುವ ಸೇವೆಯನ್ನು ನಾವು ಅತಿ ಸಮೀಪದಿಂದ ಗಮನಿಸಿದ್ದೇವೆ ಸಂಸ್ಥೆಯ ನಿರ್ದೇಶಕರು ಧರ್ಮ ಗುರುಗಳು ಹಾಗೂ ಸಿಸ್ಟರ್ ಅವರು ತಮ್ಮ ಜೀವನವನ್ನೇ ಸಮಾಜದ ನಿಸ್ವಾರ್ಥ ಸೇವೆಗಾಗಿ ಮುಡಿಪಿಟ್ಟಿದ್ದಾರೆ. ಹುಮ್ನಾಬಾದ್ ತಾಲೂಕಿನ ಪಾಟೀಲ್ ಪರಿವಾರ ಆರ್ಬಿಟ್ ಸಂಸ್ಥೆಯೊಂದಿಗೆ ಸದಾ ಬೆಂಬಲವಾಗಿರುವುದಾಗಿ ನುಡಿದರು.

ಶ್ರೀ ದಾಸ್ ಸೂರ್ಯವಂಶಿ, ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ರಾಜ್ಯ ಆಯುಕ್ತರು, ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ವಿಶೇಷ ಚೇತನರಿಗಾಗಿ ಸರಕಾರವು ಹಲವಾರು ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ ಇದರ ಸದುಪಯೋಗವನ್ನು ಪ್ರತಿಯೊಬ್ಬ ವಿಶೇಷ ಚೇತನರು ಪಡೆದುಕೊಳ್ಳಬೇಕು. ಸರಕಾರದ ಸೌಲತ್ತುಗಳು ಅರ್ಹ ಫಲಾನುಭವಿಗಳು ಅನುಭವಿಸಬೇಕು. ಸರಕಾರದ ಎಲ್ಲಾ ಕಚೇರಿಗಳು ಅಂಗವಿಕಲರ ಸ್ನೇಹಿಯಾಗಿ ಪರಿವರ್ತಿಸುವ ಉದ್ದೇಶ ಹೊಂದಿದ್ದೇವೆ. ಐದು ಪ್ರತಿಶತ ಅನುದಾನವನ್ನು ವಿಶೇಷ ಚೇತನರಿಗಾಗಿ ಬಳಸುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳುತ್ತಿದ್ದೇವೆ. ಬರುವ ಮುಂದಿನ ದಿನಗಳಲ್ಲಿ ಪ್ರತಿ ಗ್ರಾಮದಲ್ಲಿ ಅಂಗವಿಕರ ಹಾಗೂ ಪೋಷಕರ ಸ್ವಸಹಾಯ ಗುಂಪುಗಳನ್ನು ರಚಿಸುವ ಮೂಲಕ ಅವರ ಸಬಲೀಕರಣಕ್ಕಾಗಿ ಗಂಭೀರ ಕಾರ್ಯ ಯೋಜನೆಗಳನ್ನು ಹಾಕಿಕೊಂಡು ಆ ನಿಟ್ಟಿನಲ್ಲಿ ಕಾರ್ಯ ಮಾಡುತ್ತಿದ್ದೇವೆ. ವಿಶೇಷ ಚೇತನರಿಗೆ ಯಾವುದೇ ಸಮಸ್ಯೆ ಎದುರಾದರೂ ನೇರವಾಗಿ ನಮ್ಮನ್ನು ಸಂಪರ್ಕಿಸಿ ಪರಿಹಾರ ಕಂಡುಕೊಳ್ಳಬಹುದು ಎಂದು ಈ ಸಂದರ್ಭದಲ್ಲಿ ಅಭಯ ಹಸ್ತವನ್ನು ನೀಡಿದರು.

ಪೂರ್ವ ನಿರ್ದೇಶಕರಾದ ಫಾದರ್ ಸಂತೋಷ್ ಡಯಾಸ್ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಈ 30 ವರ್ಷಗಳಲ್ಲಿ ಸಂಸ್ಥೆ ಬೆಳೆಯುವುದರೊಂದಿಗೆ ಸಂಸ್ಥೆಯ ಫಲಾನುಭವಿಗಳಾದ ಮಹಿಳೆಯರು ಸಹ ಬೆಳೆದಿರುವುದು ತುಂಬಾ ಸಂತೋಷದ ಸಂಗತಿ. ಪೂರ್ವದಲ್ಲಿ ಮಹಿಳಾ ಸ್ವಸಹಾಯ ಸಂಘಗಳನ್ನು ರಚಿಸುವಾಗ ಅನೇಕ ಅಡೆತಡೆಗಳು ಎದುರಾದವು ನಂತರ ನಿರಂತರ ಪ್ರಯತ್ನದಿಂದ ಮುಂದೆ ಮಹಿಳೆಯರು ಸಕ್ರಿಯವಾಗಿ ಸ್ವಸಹಾಯ ಸಂಘಗಳಲ್ಲಿ ಪಾಲ್ಗೊಳ್ಳುವ ಮೂಲಕ ಆರ್ಥಿಕ ಸ್ವಾತಂತ್ರವನ್ನು ಪಡೆದುಕೊಂಡಿರುವುದು ಎಲ್ಲರಿಗೂ ಮಾದರಿಯ ವಿಷಯ. 'ಚಪ್ಪಾಳೆ ತಟ್ಟುವ ಕೈಗಿಂತ ಕಣ್ಣೀರು ಒರೆಸುವ ಒಂದು ಬೆರಳು ಶ್ರೇಷ್ಠ' ಆರ್ಬಿಟ್ ಸಂಸ್ಥೆಯ ಪರಿಶ್ರಮ ಇದರಲ್ಲಿ ಎದ್ದು ಕಾಣುತ್ತದೆ ಎಂದು ನುಡಿದರು.

ಸಂಸ್ಥೆಯ ಫಲಾನುಭವಿ ಶ್ರೀಮತಿ ವಿಮಲಬಾಯಿ ತಮ್ಮ ಅನುಭವವನ್ನು ಹಂಚಿಕೊಳ್ಳುವ ಮೂಲಕ ಸುಮಾರು 0 ವರ್ಷಗಳಿಂದ ಆರ್ಬಿಟ್ ಸಂಸ್ಥೆಯೊಂದಿಗೆ ನಿಕಟ ಸಂಬಂಧವನ್ನು ಹೊಂದಿ ಮಹಿಳಾ ಸ್ವಸಹಾಯ ಸಂಘದಲ್ಲಿ ಸಕ್ರಿಯ ಸದಸ್ಯತ್ವವನ್ನು ಪಡೆದು-ಕೊಂಡು, ಸಂಸ್ಥೆಯ ಪ್ರತಿಯೊಂದು ಕಾರ್ಯಕ್ರಮ, ತರಬೇತಿಗಳು ಅರಿವು ಮೂಡಿಸುವ, ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಇಂದು ನಾವು ಸಮಾಜದ ಮುಖ್ಯ ವಾಹಿನಿಯಲ್ಲಿ ಆರ್ಥಿಕ ಸ್ವಾತಂತ್ರದೊಂದಿಗೆ ಮಹಿಳಾ ನಾಯಕತ್ವ ಗುಣಗಳನ್ನು ಬೆಳೆಸಿಕೊಂಡಿದ್ದೇವೆ. ಆರ್ಬಿಟ್ ಸಂಸ್ಥೆ ನಮಗೆ ಪುನರ್ಜನ್ಮವನ್ನು ನೀಡಿದೆ ಎಂದು ತಮ್ಮ ಅನುಭವವನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ಫಲಾನುಭವಿಗಳಿಗೆ ವೀಲ್ ಚೇರ್, ಸಹಾಯಧನ, ಕುರಿ ವಿತರಣೆ, ಸರಕಾರಿ ಸವಲತ್ತುಗಳ ಯುಡಿಐಡಿ ಕಾರ್ಡ್, ತರಬೇತಿಯಲ್ಲಿ ಭಾಗವಹಿಸಿ ಪಡೆದುಕೊಂಡ ಪ್ರಮಾಣ ಪತ್ರಗಳು ಹಾಗೂ ಡ್ರೈವಿಂಗ್ ಲೈಸೆನ್ಸ್ ಗಳನ್ನು ಫಲಾನುಭವಿಗಳಿಗೆ ಗಣ್ಯರಿಂದ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಮಹಿಳೆಯರಿಂದ ಕೋಲಾಟ, ಜಾನಪದ ಗೀತೆಗಳು, ನೃತ್ಯ, ಶಾಲಾ ಮಕ್ಕಳಿಂದ ಅರಿವು ಮೂಡಿಸುವ ನಾಟಕ, ಮಾಡುವ ಮೂಲಕ ನೆರೆದಿದ್ದ ಜನರನ್ನು ರಂಜಿಸಿದರು.

ಕಾರ್ಯಕ್ರಮದಲ್ಲಿ ಮೌಲಾನಾ ತಸದ್ದುಗ್ ಶಾಬ್ ನದವೆ ಅಧ್ಯಕ್ಷರು ಜಮಾತೆ ಉಲ್ಮ ಬೀದರ್ ಇವರು ತಮ್ಮ ಹಿತನುಡಿಗಳನ್ನು ನುಡಿ-ದರು. ಸಂತೋಷ್ ಪಾಟೀಲ್ ಹುಮ್ನಾಬಾದ್, ಬೀದರ್ ವಲಯದ ಮುಖ್ಯಗುರುಗಳಾದ ಕ್ಲೇರಿ ಡಿಸೋಜಾ, ಹುಮ್ನಾಬಾದ್ ತಾಲೂಕಿನ ಮುಖ್ಯ ವೈದ್ಯಾಧಿಕಾರಿಗಳಾದ ನಾಗನಾಥ್ ಹುಲಸೂರೆ, ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಡಾಕ್ಟರ್ ಗುರುರಾಜ್ ಕುಲಕರ್ಣಿ, ಶ್ರೀ ಶ್ರೀನಿಧಿ ಉಪಸ್ಥಿತರಿದ್ದರು. ಕಥೋಲಿಕ ಧರ್ಮಸಭೆಯ ಗುರುಗಳು ಹಾಗೂ ಸಿಸ್ಟರ್ ಬಹು ಸಂಖ್ಯೆಯಲ್ಲಿ ಭಾಗವಹಿಸಿದರು, ಸಂಸ್ಥೆಯ ಒಟ್ಟು ಫಲಾನುಭವಿಗಳು ಸುಮಾರು 1200 ಜನ ಭಾಗವಹಿಸಿದರು ಹಾಗೂ ಸಂಸ್ಥೆಯ ಎಲ್ಲಾ ಸಿಬ್ಬಂದಿವರ್ಗದವರು ಸಕ್ರೀಯವಾಗಿ ಭಾಗವಹಿಸುವ ಮೂಲಕ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಪ್ರಾರ್ಥನಾ ನೃತ್ಯ ಬೆಥನಿ ಶಾಲೆಯ ಮಕ್ಕಳಿಂದ, ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಸ್ವಾಗತಿಸಿದರು, ಫಾದರ್ ಸಚಿನ್, ಸಿಸ್ಟರ್ ಕ್ರಿಸ್ಟಿನ ನಿರೂಪಿಸಿದರು, ಶ್ರೀಮತಿ ಸವಿತಾ ವಂದಿಸಿದರು.

---

# ಆರ್ಬಿಟ್ ಸಂಸ್ಥೆಯು 30 ವರ್ಷಗಳಿಂದ ಬಡವರ ಕಣ್ಣೀರು ಒರೆಸುವ ಕೆಲಸ ಮಾಡಿದೆ



ವಿಶ್ವ ದರ್ಶನ ಸುದ್ದಿ ಹುಮನಾಬಾದ: ಬೀದರ್ ಜಿಲ್ಲೆಯ ಹುಮ್ನಾಬಾದ್ ಪಟ್ಟಣದ ಆರ್ಬಿಟ್ ಸಂಸ್ಥೆಯು 30 ವರ್ಷಗಳಿಂದ ಬಡವರ ಕಣ್ಣೀರು ಒರೆಸುವ ಕೆಲಸ ಮಾಡಿದೆ. ಸಂಸ್ಥೆಯು ಹಲವಾರು ಯೋಜನೆಗಳ ಮುಖಾಂತರ ಸಮುದಾಯದಿಂದ ತಳ್ಳಲ್ಪಟ್ಟವರ, ನೋವಿಗೆ ಸ್ಪಂದಿಸುವ ಕಾರ್ಯ ಮಾಡಿದೆ ಎಂದು ಗುಲ್ಬರ್ಗ ಧರ್ಮ ಕ್ಷೇತ್ರದ ಧರ್ಮಾಧಿಕಾರಿಗಳಾದ ಡಾ. ರಾಬರ್ಟ್ ಮೈಕಲ್ ಮಿರಂದ ಹೇಳಿದರು.

ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ಜನವರಿ 16 ಗುರುವಾರ ಸಂಸ್ಥೆಯ 30 ವರ್ಷದ ಜುಬುಲಿ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿಧಾನ ಪರಿಷತ್ ಸದಸ್ಯರಾದ ಡಾ. ಚಂದ್ರಶೇಖರ್ ಪಾಟೀಲರು ಮಾತನಾಡಿ, ಸಂಸ್ಥೆ 30 ವರ್ಷಗಳಲ್ಲಿ ಮಾಡಿದ ಸೇವೆಯು ಸುವರ್ಣ ಅಕ್ಷರಗಳಲ್ಲಿ ಬರೆಯುವಂತದ್ದು. ದೀನರ, ದಲಿತರ, ದಿಕ್ಕಿಲ್ಲದವರಿಗಾಗಿ ಸದಾ ಸೇವೆಯನ್ನು ಮಾಡುತ್ತಿದೆ. ವಿಶೇಷವಾಗಿ ಆರೋಗ್ಯ ಕ್ಷೇತ್ರ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಜನರ ಜೀವನ ಮಟ್ಟ ಉನ್ನತ ಮಟ್ಟಕ್ಕೆ ಏರಿಸುವಲ್ಲಿ ಸಂಸ್ಥೆಯ ಪಾತ್ರ ತುಂಬಾ ದೊಡ್ಡದಾಗಿದೆ ಎಂದರು.

ಫಾದರ ಸಂತೋಷ ಡಯಾಸ, 30 ವರ್ಷಗಳಲ್ಲಿ ಸಂಸ್ಥೆ ಬೆಳೆಯುವುದರೊಂದಿಗೆ ಸಂಸ್ಥೆಯ ಫಲಾನುಭವಿಗಳಾದ ಮಹಿಳೆಯರು ಸಹ ಬೆಳೆದಿರುವುದು ತುಂಬಾ ಸಂತೋಷದ ಸಂಗತಿ. ಪೂರ್ವದಲ್ಲಿ ಮಹಿಳಾ ಸ್ವಸಹಾಯ ಸಂಘಗಳನ್ನು ರಚಿಸುವಾಗ ಅನೇಕ ಅಡೆತಡೆಗಳು ಎದುರಾದವು ನಂತರ ನಿರಂತರ ಪ್ರಯತ್ನದಿಂದ ಮುಂದೆ ಮಹಿಳೆಯರು ಸಕ್ರಿಯವಾಗಿ ಸ್ವಸಹಾಯ ಸಂಘಗಳಲ್ಲಿ ಪಾಲ್ಗೊಳ್ಳುವ ಮೂಲಕ ಆರ್ಥಿಕ ಸ್ವಾತಂತ್ರ್ಯವನ್ನು ಪಡೆದುಕೊಂಡಿರುವುದು ಎಲ್ಲರಿಗೂ ಮಾದರಿಯ

ವಿಷಯ. ಚಪ್ಪಾಳೆ ತಟ್ಟುವ ಕೈಗಿಂತ ಕಣ್ಣೀರು ಒರೆಸುವ ಒಂದು ಬೆರಳು ಶ್ರೇಷ್ಠ' ಆರ್ಬಿಟ್ ಸಂಸ್ಥೆಯ ಪರಿಶ್ರಮ ಇದರಲ್ಲಿ ಎದ್ದು ಕಾಣುತ್ತದೆ ಎಂದರು.

ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ರಾಜ್ಯ ಆಯುಕ್ತ ವಾಸ್ ಸೂರ್ಯವಂಶಿ, ಮೌಲಾನಾ ತಸದ್ದುಗ್ ಶಾಟ್ ನದವೆ. ಕೇರಿ ಡಿಸೋಜಾ, ಸಂತೋಷ್ ಪಾಟೀಲ, ಡಾ. ನಾಗನಾಥ ಹುಲಸೂರೆ. ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಡಾ. ಗುರುರಾಜ ಕುಲಕರ್ಣಿ, ಶ್ರೀನಿಧಿ ಸೇರಿ ಅನೇಕರು ಉಪಸ್ಥಿತರಿದ್ದರು.

ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಸ್ವಾಗತಿಸಿದರು. ಫಾದರ್ ಸಚಿನ್, ಸಿಸ್ಟರ್ ಕ್ರಿಸ್ಟಿನ ನಿರೂಪಿಸಿದರು, ಸವಿತಾ ವಂದಿಸಿದರು.

# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

# TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುರ್ನವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಪೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.





**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್
ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ಪ್ರಾಯೋಜಕರು ಒಂದು ಮಗು
ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

| | | |
|---|---|---|
| Name | : | Sevasangama Development Society |
| Account No | : | 16040100022902 |
| IFSC Code | : | FDRL0001604 |
| Bank | : | Federal Bank |
| Branch | : | Super Market Kalaburagi |


Fr. Victor Anil Vas
Director, Seva Sangama & ORBIT

Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102

Contact: 8660968063 / 9743112739 - Email: sevasangama2006@gmail.com / Website: www.sevasangama.in